ಮೊಟ್ಟಮೊದಲನೆಯದಾಗಿ ಯೂತ್ ಸರ್ವಿಸಸ್, ಡಿಮ್ಯಾಂಡ್ ನಂಬರ್ ೨೬ರ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ರಾಜ್ಯದಲ್ಲಿ ಯುವಜನ ಸೇವೆಗೆ ಒಂದು ಇಲಾಖೆ ಇದೆ. ಅದರ ಸೇವೆ ಹಿಂದೆ ಅಧಿಕಾರ ನಡೆಸದಂಥಾವರು ಎಕ್ಸ್‌ಪೋ ೭೦ ಅಂತ ಏನು ಮಾಡಿದರು ಅದನ್ನು ನೆನಪು ಮಾಡಿಕೊಂಡರೆ ಈ ಯುವಜನ ಸೇವೆ ಹೇಗೆ ನಡೆಯುತ್ತಾ ಇದೆ ಎನ್ನುವ ಸತ್ಯ ಚಿತ್ರ ನಮ್ಮ ಕಣ್ಣು ಮುಂದೆ ಬರುತ್ತದೆ. ಅಲ್ಲದೇ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲಾದರೂ ಏನಾದರೂ ಒಂದು ಹೊಸ ಹೆಜ್ಜೆ ಇಟ್ಟಿದ್ದಾರೆಯೇ ಎನ್ನುವುದನ್ನು ನೋಡಿದರೆ ಇವರು ಯಾವ ಹೊಸ ಹೆಜ್ಜೆಯನ್ನೂ ಇಟ್ಟಿಲ್ಲ. ಹಳೇ ದಾರಿಯಲ್ಲಿ, ಹಳೇ ಹೆಜ್ಜೆಯನ್ನೇ ಹಾಕಿಕೊಂಡು ಹೋಗುತ್ತಿದ್ದಾರೆ ಯೂತ್ ಸರ್ವಿಸಸ್‌ನವರು ಯೂತ್ ಮೈಸೂರ್ ಎನ್ನುವ ಪತ್ರಿಕೆಯನ್ನು ನಡೆಸುತ್ತಿದ್ದಾರೆ. ಅದನ್ನು ಯಾವ ಜನರ ಸಲುವಾಗಿ ನಡೆಸುತ್ತಿದ್ದಾರೋ ಏನೂ ನನಗೆ ಅರ್ಥವಾಗುವುದಿಲ್ಲ. ಆ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯಗಳನ್ನು ಗಮನಿಸಿದರೆ ಅದನ್ನು ಯಾರೂ ಓದುವುದಕ್ಕೆ ಹೋಗುವುದಿಲ್ಲ ಅದನ್ನು ನೋಡಿದರೆ ಮಾನ ಮರ್ಯಾದೆ ಇರತಕ್ಕಂಥ ಹಳ್ಳಿ ಜನರಿಗೆ ನಾಚಿಕೆಯಾಗುತ್ತದೆ. ಇದನ್ನು ನಡೆಸುತ್ತಾ ಇರುವವರೂ ಕೂಡ ಯಾರು ಎನ್ನುವುದು ಗೊತ್ತು. ಆದರೆ ಅವರಿಗೆ ಏನಾದರೂ ಇದೇ ಚೆಂದ ಎನ್ನುವುದಾದರೆ ಅದಕ್ಕೆ ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇಂಥಾದ್ದಕ್ಕೆ ಬಡ ಬೋರೇಗೌಡನ ಹಣವನ್ನು ಉಪಯೋಗ ಮಾಡಬಾರದು ಎಂದು ಹೇಳುತ್ತೇನೆ.

ಇನ್ನು ಯುವಕ ಕೇಂದ್ರಗಳನ್ನು ಮಾಡಿದ್ದಾರೆ. ನೆಹರೂ ಯುವಕ ಕೇಂದ್ರ, ಆ ಕೇಂದ್ರ, ಈ ಕೇಂದ್ರ ಅಂತ ಮಾಡಿದ್ದಾರೆ. ಇಂಥಾ ಯುವಕ ಕೇಂದ್ರಗಳನ್ನು ಬರೇ ದೊಡ್ಡ ದೊಡ್ಡ ಪಟ್ಟಣದಲ್ಲಿ ತೆರೆದಿದ್ದಾರೇ ಹೊರತು ಹಳ್ಳಿಗಳಲ್ಲಿ ತೆರೆದಿಲ್ಲ. ಆದುದರಿಂದ ನಾನು ಕೇಳುವುದು ನಿಮ್ಮ ಯುವಜನ ಕೇಂದ್ರಗಳನ್ನು ಹಳ್ಳಿಗಳಲ್ಲಿ ಎಷ್ಟೆಷ್ಟು ತೆರೆದಿದ್ದೀರಿ ಎನ್ನುವ ಮಾಹಿತಿ ಕೊಡಬೇಕು ಎಂದು.

ಏಕೆಂದರೆ, ಸರ್ಕಾರದ ಯೋಜನೆಗಳು ಎಲ್ಲವೂ ಕೂಡ ನಗರದಲ್ಲಿಯೇ ಆಗತಕ್ಕಂಥ ವ್ಯವಸ್ಥೆಯಿಂದ ಇದು ನಿರ್ಮಾಣವಾಯಿತು. ಸರ್ಕಾರದ ಯೋಜನೆಗಳು ಏನು ಇವೆ, ಅವೆಲ್ಲಾ ನಗರಕ್ಕೆ ಮೀಸಲಾಗಿ, ಹಳ್ಳಿಗಳಿಗೆ ತಿಲಾಂಜಲಿ ಕೊಟ್ಟು, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಯುವಕರು ಯಾರಿದ್ದಾರೆ, ಅವರಿಗೆ ಅನ್ಯಾಯವಾಗಿದೆ. ಈ ರೀತಿ ಸರ್ಕಾರದವರು ಮಾಡದೆ, ಗ್ರಾಮಾಂತರ ಯುವಕರ ಬಗ್ಗೆ, ಅವರಲ್ಲಿ ಜಾಗ್ರತೆಯನ್ನುಂಟು ಮಾಡುವುದಕ್ಕೆ ಹೆಚ್ಚಿನ ಹಣವನ್ನು, ಮತ್ತು ಯೋಜನೆಯನ್ನು ನಿಗದಿಗೊಳಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಫೈರ್ ಮತ್ತು ಪ್ರೊಟೆಕ್ಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇವತ್ತು ನಮ್ಮ ಹಳ್ಳಿಗಳಲ್ಲಿ ಬಿಸಿಲಿನ ಸಮಯದಲ್ಲಿ ಬೆಂಕಿ ಆಕಸ್ಮಿಕವಾಗಿ ಬಿದ್ದು ಬತ್ತದ ಗದ್ದೆಗಳು, ಕಬ್ಬಿನ ಗದ್ದೆಗಳು

(ಶ್ರೀ ಕೋಣಂದೂರು ಲಿಂಗಪ್ಪ)

ಎಲ್ಲವೂ ಭಸ್ಮವಾಗತಕ್ಕ ದಾರುಣ ಚಿತ್ರವನ್ನು ನಾವು ಕಂಡಿದ್ದೇವೆ. ಪ್ರತಿ ಜಿಲ್ಲೆಗೂ ಒಂದೊಂದು ಫೈರ್ ಬ್ರಿಗೇಡ್ ಕೊಡಿ ಎಂದು ನಾವು ಸರ್ಕಾರವನ್ನು ಅನೇಕ ಸಾರಿ ಕೇಳಿದ್ದೇವೆ. ಅದಕ್ಕೆ ಅವರು ನಮ್ಮಲ್ಲಿ ದುಡ್ಡು ಇಲ್ಲ ಎನ್ನುವುದೇ ಉತ್ತರವಾಗಿದೆ. ರೈತರಿಗೆ ಪ್ರಯೋಜನಕಾರಿ ಯಾಗಿರತಕ್ಕ ಕೆಲಸಗಳಿಗೆ ಹಣ ಇಲ್ಲ, ಇರತಕ್ಕ ಹಣವನ್ನು ಹೇಗೆ ವಿನಿಯೋಗಿಸುತ್ತಿದ್ದಾರೆ ಎನ್ನುವುದರ ಬಗ್ಗೆ ನಾವು ಪರಿಶೀಲನೆ ಮಾಡಿದರೆ ಸರ್ಕಾರ ಕೇವಲ ಪೇಟೆ ಮತ್ತು ದೊಡ್ಡ ದೊಡ್ಡ ಷಹರುಗಳಿಗೆ ಹಣವನ್ನು ವಿನಿಯೋಗಿಸಲಾಗಿಡುವಂಥ ಯೋಜನೆ ಗಳನ್ನು ಹಾಕಿ ಅವುಗಳನ್ನು ಕಾರ್ಯಗತ ಮಾಡುತ್ತಿದ್ದ. ಹಳ್ಳಿಗಳಲ್ಲಿ ಬೇಕಾದಂಥ ರೀತಿಯ ಯಾವ ಒಂದು ಕಾರ್ಯಕ್ರಮವನ್ನೂ ಇವರು ಕಾರ್ಯಗತ ಮಾಡುತ್ತಿಲ್ಲ ಎನ್ನುವುದು ಇದರಿಂದ ಸುಸ್ಪಷ್ಟ ವಾಗುತ್ತದೆ. ಆದ್ದರಿಂದ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಫೈರ್ ಬ್ರಿಗೇಡ್ ಮಾಡಿದರೆ ಬೆಂಕಿಯ ಆಕಸ್ಮಿಕದಿಂದ ರೈತರು ರಕ್ಷಣೆ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ

ಇನ್ನು ಜೈಲುಗಳ ಬಗ್ಗೆ ಹೇಳಬೇಕಾದದ್ದು ಇದೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸಚಿವ ಸಂಪುಟದಲ್ಲಿರತಕ್ಕವರು ಬಹಳ ಹಿಂದೆ ಜೈಲಿಗೆ ಹೋಗಿ ಬಂದಿರಬಹುದು. ಆದರೆ ನಾವು ಮೊನ್ನೆ ಮೊನೆ ಹೋಗಿ ಬಂದಿದ್ದೇವೆ. ಮತ್ತೆ ಕಳುಹಿಸುವುದಕ್ಕೆ ತಯಾರಿದ್ದಾರೆ. ಅವರು ಜೈಲಿಗೆ ಹೋಗಿ, ಮೂರು ದಿವಸ ಇದ್ದು ಊಟ ಮಾಡಿದರೆ ಅದರ ಪರಿಸ್ಥಿತಿ ಆಗ ಅವರಿಗೆ ಅರ್ಥವಾಗುತ್ತದೆ. ಸಚಿವ ಸಂಪುಟದ ಮಂತ್ರಿಗಳು ಯಾರಿದ್ದಾರೆ. ಅವರ ಮನೆಯಲ್ಲಿರತಕ್ಕ ನಾಯಿಗಳಿಗೆ ಜೈಲಿನಲ್ಲಿರತಕ್ಕ ಜನರಿಗೆ ಹಾಕತಕ್ಕ ಊಟವನ್ನು ಹಾಕಿದರೆ, ಅವೂ ಕೂಡ ತಿನ್ನುವುದಿಲ್ಲ. ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಆಹಾರ ವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕಾದದು ಅಗತ್ಯ ಮತ್ತು ಅವಶ್ಯಕ ಅವರು ಆಕಸ್ಮಿಕವಾಗಿ ಅಲ್ಲಿಗೆ ಹೋಗಿರಬಹುದು. ಅವರು ಪಶ್ಚಾತ್ತಾಪದಿಂದ ಈಗ ಪುನೀತರಾಗಿರಬಹುದು.

ಶ್ರೀ ಡಿ. ದೇವರಾಜ ಅರಸ್.— ಅಲ್ಲಿ ಊಟ ಬಹಳ ಚೆನ್ನಾಗಿರುವುದಾಗಿದ್ದರೆ ನೀವು ಅಲ್ಲಿಯೇ ಇದ್ದು ಬಿಡುತ್ತಿದ್ದಿರೋ !

ಶ್ರೀ ಕೋಣಂದೂರು ಲಿಂಗಪ್ಪ.— ಗರೀಬಿ ಹಟಾವು ಮಾಡುವ ಬದಲು. ಜೈಲಿನಲ್ಲಿ ಅನ್ನದ ಹಟಾವ್ ಮಾಡುತ್ತಿದ್ದೀರಿ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಕ್ಕಿಂತ ಹೇಳದೆ ಇರುವುದು ಉತ್ತಮವಾಗಿದೆ. ಈ ಸರ್ಕಾರವನ್ನು ೧೦೭ರ ಸರ್ಕಾರ ಎಂದು ಕರೆದರೆ ತಪ್ಪಾಗಲಾರದು. ಏಕೆಂದರೆ, ಇವತ್ತು ಹಳ್ಳಿಗಳಲ್ಲಿರ ತಕ್ಕ ಜನರು ಮುಗ್ಧರು, ಪ್ರಾಮಾಣಿಕರು, ಅವರು ಯಾವುದನ್ನೂ ಕಂಡರಿಯದೆ ಇರತಕ್ಕವರು, ಇವರ ಮೇಲೆ ಕೆಲವರು ಪೋಲೀಸ್ ಅಧಿಕಾರಿಗಳಿಗೆ ಹೇಳಿ ೧೦೭ರ ಸೆಕ್ಷನ್ ಅನ್ನು ನಮ್ಮ ಮಲೆನಾಡಿನಲ್ಲಿ ಹಾಕಿದ್ದಾರೆ. ಭೂಲೋಕ ಹುಟ್ಟಿದ ಮೇಲೆ, ಈಸೂರಿನ ಪ್ರಸಂಗವೊಂದನ್ನು ಬಿಟ್ಟರೆ, ಗೂಂಡಾಗಳ ಹೆಸರನ್ನು ಹೇಳುವಂಥ ಹಳ್ಳಿಗಳು ಇರಲಿಲ್ಲ.

ಶ್ರೀ ಡಿ. ದೇವರಾಜ ಅರಸ್. — ನಿಮ್ಮನ್ನು ನೋಡಿದ ಮೇಲೆ ಮಲೆನಾಡಿನಲ್ಲಿ ಎಂಥವರು ಇದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ಚಟುವಟಿಕೆಗಳನ್ನು ತೀವ್ರವಾಗಿ ಮಾಡಿದರೆ ನೀವು ಇಲ್ಲಿ ಉಳಿಯುವುದಕ್ಕಾಗುವುದಿಲ್ಲ. ಮಲೆನಾಡಿನಲ್ಲಿ ೧೦೭ನೇ ಸೆಕ್ಷನ್ ಹಾಕಿ, ಹಳ್ಳಿಗರು ಕೋರ್ಟಿಗೆ, ೪೦-೫೦ ಮೈಲಿ ದೂರ ಅಲೆಸುತ್ತಿದ್ದಾರೆ. ಶ್ರೀಮಂತರು, ಪಟ್ಟಭದ್ರ ಶಕ್ತಿಗಳು ಹೇಳಿದರು ಎಂದು ಅವರ ಮೇಲೆ ಕೇಸ್ ಹಾಕಿದ್ದಾರೆ. ತಪ್ಪು ಮಾಡಿದ್ದರೆ, ಯಾರೇ ಆಗಿರಲಿ ಅವರಿಗೆ ಶಿಕ್ಷೆಯಾಗಬೇಕು, ಗೇಣಿದಾರರಾಗಲೀ ಭೂಮಾಲೀಕರಾಗಲೀ ನಮ್ಮ ಅಭ್ಯಂತರವಿಲ್ಲ. ಇಂಥ ಪ್ರಕರಣಗಳು ನಮ್ಮ ಕ್ಷೇತ್ರ ದಲ್ಲಿ ನಡೆದಿವೆ. ಹೊಸನಗರದಲ್ಲಿಯೂ ನಡೆಯುತ್ತಿವೆ. ಅಧಿಕಾರಿಗಳು ಭೂಮಾಲಿಕರ ಮತ್ತು ಶ್ರೀಮಂತ ವರ್ಗದವರ ಕೈಗೊಂಬೆಗಳಾಗಿದ್ದಾರೆ. ಇಂಥ ಸರ್ಕಾರವನ್ನು ನಾವು ಏನು ಎಂದು ಕರೆಯಬೇಕು ಎನ್ನುವು ದನ್ನು ವಿಚಾರಮಾಡಬೇಕಾಗಿದೆ. ನಮ್ಮ ಸರ್ಕಾರದ ಪೋಲೀಸ್ ಇಲಾಖೆಯ ದಕ್ಷತೆಯ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಿದರೆ ಉಚಿತವಾಗಿರುತ್ತದೆ. ಹೋದ ವರ್ಷ, ಶ್ರೀಮಾನ್ ಕಿತ್ತೂರ್ ಅವರ ಪ್ರಕರಣ ನಡೆಯಿತು. ಆ ಸಂದರ್ಭದಲ್ಲಿ ಶ್ರೀಮತಿ ಸುಮಿತ್ರಾ ದೇಸಾಯಿ ವಿಚಾರವಾಗಿ, ಒಂದು ವಾರ ಕಾಲ ಆ ಪ್ರಕರಣ ಈ ಸದನದಲ್ಲಿ ನಡೆದಿದ್ದೆ, ಇದು ಎಲ್ಲರಿಗೂ ಗೊತ್ತಿದೆ. ಎಲ್ಲಿ ಹೋದರು ಸುಮಿತ್ರಾ ದೇಸಾಯಿ? ಎಲ್ಲಾ ಹುಡುಕಿದರು, ಭೂಮಿ ಆಕಾಶ ಎಲ್ಲಾ ಅಲೆದಾಡಿದರು. ಅವರು ಎಲ್ಲಿಯೂ

ಹೋಗಿರಲಿಲ್ಲ. ಸುಮಿತ್ರಾ ದೇಸಾಯಿ ಅವರು ಕೋರ್ಟಿನಲ್ಲಿ ಮೆಜಿಸ್ಟ್ರೇಟರ ಮುಂದೆ ಅಫಿಡೆವಿಟ್‌ನಲ್ಲಿ ಹೇಳಿದ್ದಾರೆ, ಆ ಸಂದರ್ಭದಲ್ಲಿ ನಾನು ಸಾಯಿಬಾಬಾ ಅವರ ಆಶ್ರಮದಲ್ಲಿದೆ ಎಂದು ಸಾಯಿಬಾಬಾ ಅವರ ಆಶ್ರಮದಲ್ಲಿದ್ದಂಥ ಇವರನ್ನು ಪತ್ತೆ ಹಚ್ಚುವುದಕ್ಕೆ ಪೋಲೀಸ್ ಇಲಾಖೆಯಿಂದ ಆಗಲಿಲ್ಲ. ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ. ಸಾಯಿಬಾಬಾ ಅವರು ಇವರನ್ನು ಮುಚ್ಚಿಟ್ಟು ಕೊಂಡಿರುವುದರ ಉದ್ದೇಶ ಏನು? ಅವರ ಬಗ್ಗೆ ಅಪಾರವಾದ ಭಕ್ತಿ ಇದೆ, ಅವರು ಮಾಯಾಬಜಾರ್ ಮಾಡುತ್ತಾರೆ ಬೂದಿಯಿಂದ ಭಸ್ಮ ಮಾಡಿಕೊಡುತ್ತಾರೆ. ಇನ್ನು ಏನೇನೂ ಇದೆ, ಅದೆಲ್ಲಾ ತಮಗೂ ಗೊತ್ತಿದೆ, ಪೋಲೀಸ್ ದಕ್ಷತೆಯ ಬಗ್ಗೆ ವಿಚಾರ ಮಾಡಿದಾಗ, ಬೆಂಗಳೂರಿನ ಸುತ್ತಮುತ್ತ ಇದ್ದವರನ್ನು ಇವರಿಂದ ಪತ್ತೆ ಹಚ್ಚುವುದಕ್ಕೆ ಆಗಲಿಲ್ಲ ಎಂದರೆ, ಪೋಲೀಸರ ದಕ್ಷತೆಯನ್ನು ನಾವು ಪ್ರಶ್ನಿಸುವುದರಲ್ಲಿ ಯಾವ ಒಂದು ವಿಶೇಷವೂ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನು ನಮ್ಮಂಥವರಿಗೆ ಬರುವಂಥ ಮೂಕರ್ಜಿಗಳ ಬಗ್ಗೆ ಕೆಲವೊಂದು ಮಾತನ್ನು ಹೇಳುತ್ತೇನೆ. ಈ ಮೂಕರ್ಜಿಗಳು ಯಾವ ಒಂದು ರುಜುವಾತೂ ಇಲ್ಲದೆ ಬರುತ್ತವೆ, ಒಂದು ಪ್ರಕರಣದಲ್ಲಿ ನನಗೆ ಒಂದು ಮೂಕರ್ಜಿ ಬಂತು. ಅದರಲ್ಲಿ ಏನು ಇದೆಯೆಂದರೆ, ಗುಜರಾತಿನಲ್ಲಿ ಸುಮಿತ್ರಾ ದೇಸಾಯಿ ಆರ್.ಡಿ.ಕಿತ್ತೂರರ ವಶದಲ್ಲಿದ್ದರು ಎಂದು ಇದು ಕುರವಾರದಿಂದ ಬಂದಿದೆ, ನಿಜವಾದ ಅಭಿಪ್ರಾಯವನ್ನು ಇದು ಹೌದೇ ಅಲ್ಲವೇ ಎನ್ನುವುದನ್ನು, ತಿಳಿಯುವುದಕ್ಕೋಸ್ಕರ, ಮತ್ತು ನಾವು ಅದರ ಬಗ್ಗೆ ಸರಿಯಾಗಿ ತಿಳಿದು ಕೊಂಡು ಹೇಳಬೇಕು ಎನ್ನುವ ಉದ್ದೇಶದಿಂದ ನಮ್ಮ ಅಲ್ಲಿಯ ಸ್ನೇಹಿತರೊಬ್ಬರಿಗೆ ಈ ಪತ್ರದಲ್ಲಿ ರುವ ಅಂಶ ಸತ್ಯವೇ, ಅಲ್ಲವೇ ಎಂದು ಕೇಳಿದಾಗ, ಅವರಿಂದ ನಮಗೆ ಪತ್ರ ಬಂತು ಇದು ಕೊಟ್ಟು ಸುದ್ದಿ ಎಂದು ಈ ರೀತಿಯಾಗಿ ಶಾಸಕರನ್ನು ಮತ್ತು ಜವಾಬ್ದಾರಿ ಇರತಕ್ಕ ಜನರನ್ನು ಕೆಟ್ಟ ದಾರಿಗೆ ಎಳೆಯತಕ್ಕ ಜನ ಯಾರು ಎನ್ನುವುದನ್ನು ತಾವು ಪತ್ತೆ ಹಚ್ಚಿ ಶಿಕ್ಷೆ ವಿಧಿಸುವುದಕ್ಕೆ ಸಾಧ್ಯವಾಗದೇ ಹೋದರೆ ಇಲ್ಲಿ ಕೆಲಸಕಾರ್ಯಗಳನ್ನು ನಾವು ಹೇಗೆ ಮಾಡಬೇಕು? ನಾವು ಬೇಜವಾಬ್ದಾರಿಯಿಂದ ವರ್ತನೆ ಮಾಡಬಾರದು ಎಂದು ಇದು ಸತ್ಯವೇ ಅಲ್ಲವೇ ಎನ್ನುವುದನ್ನು ವಿಚಾರ ಮಾಡಿದ ಮೇಲೆ ಇದು ಸತ್ಯಕ್ಕೆ ದೂರವಾದ ಮತ್ತು ಸೃಷ್ಟಿಸಿದ ಪತ್ರ ಎಂದು ಗೊತ್ತಾಯಿತು.

4–00 P. M.

ಇದನ್ನು ತಮ್ಮ ಮುಂದೆ ಇಡುತ್ತೇನೆ. ಅದುದರಿಂದ ಮಾನ್ಯ ಅಧ್ಯಕ್ಷರೆ. ಈ ಪೋಲಿಸ್ ಇಲಾಖೆಯಲ್ಲಿ ದಕ್ಷತೆ ಹೆಚ್ಚಬೇಕು. ಪ್ರಾಮಾಣಿಕತೆಯ ಬಗ್ಗೆ ಏತಕ್ಕೆ ಹೇಳಬೇಕು? ಪ್ರಾಮಾಣಿಕತೆ ಎಂದು ಹೇಳುವುದರಿಂದ ಆ ಶಬ್ದದ ಅಪವ್ಯಯವಾಗುತ್ತದೆ, ಅದು ಅರ್ಥಹೀನವಾಗುತ್ತದೆ ಉದಾಹರಣೆಗೆ ಇದೇ ಪೋಲೀಸ್ ಇಲಾಖೆಯಲ್ಲಿ ದೊಡ್ಡ ಅಧಿಕಾರಿಯ ಕೈಕೆಳಗೆ ಇರತಕ್ಕವರು ಏನು ದಾಖಲೆಗಳ ಮೂಲಕ ಸುಳ್ಳನ್ನು ಹೇಳಿ ಆಸ್ತಿಯನ್ನು ಸಂಪಾದನೆ ಮಾಡಿದ್ದಾರೆ ಎಂದು ಹೇಳುವುದಕ್ಕೆ ನಮ್ಮ ಹತ್ತಿರ ರುಜುವಾತು ಇದೆ. ಒಬ್ಬರು ಅಧಿಕಾರಿ ಸಾಮಾನ್ಯವಾಗಿ ಯಾವುದೇ ಆಸ್ತಿ ಮನೆ, ಮಾಡುವುದಾದರೂ ಕೂಡ ಮುಂಚಿತವಾಗಿ ಸರ್ಕಾರದ ಅನುಮತಿಯನ್ನು ಪಡೆಯಬೇಕಾದದ್ದು ಕಾಯಿದೆ ಪ್ರಕಾರ ಅವಶ್ಯಕ ಅದೇನೂ ಇಲ್ಲ, ಇಷ್ಟೇ ಅಲ್ಲ ಬೆಂಗಳೂರಿನ ಸುತ್ತಮುತ್ತ 5 ಮೈಲಿಗಳ ಅವರಣದಲ್ಲಿ ಯಾವುದೇ ಇದ್ದಲ್ಲೂ ಕೂಡ ಹೌಸ್ ಸೈಟನ್ನು ತಗೆದು ಕೊಳ್ಳುವುದಕ್ಕೆ ಹೌಸಿಂಗ್ ಅರ್ಜಿ ಹಾಕಬೇಕಾದರೆ ಅಫಿಡವಿಟ್ ಕೊಡಬೇಕು ಒಬ್ಬ ಅಧಿಕಾರಿಗೆ ಸ್ವಂತ ಮನೆ ರಿಜಿಸ್ಟರು ಆಗಿದ್ದರೂ ಕೂಡ ಅದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಪತ್ರಗಳು ಇದ್ದರೂ ಕೂಡ ಅಫಿಡೆವಿಟ್‌ನಲ್ಲಿ ನನಗೆ ಯಾವ ಸ್ವಂತ ಮನೆಯೂ ಇಲ್ಲ ಏನೂ ಇಲ್ಲ ವೆಂದು ಹೇಳಿ ಹೌಸಿಂಗ್ ಬೋರ್ಡ್‌ನಿಂದ ಮನೆಯನ್ನು ತೆಗೆದುಕೊಂಡಿದ್ದಾರೆ ಮಕ್ಕಳ ಹೆಸರಿನಲಿ, ತಂದೆ ಹೆಸರಿನಲ್ಲಿ, ತಾಯಿಯ ಹೆಸರಿನಲ್ಲಿ, ಸಂಬಂಧೀಕರ ಹೆಸರಿನಲ್ಲಿ, ನನಗೆ ತಿಳಿದ ಪ್ರಕಾರ ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಮಾಡಿರುವುದು ಗೊತ್ತಿದೆ ದಾಖಲಾತಿಗಳು ಇದ್ದುಕೊಂಡು ಹೇಳುತ್ತಿದ್ದೇನೆ. ರುಜುವಾತು ಕೂಡ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಈ ದೊಡ್ಡ ಅಧಿಕಾರಿಗಳು ಪೋಲೀಸ್ ಇಲಾಖೆ ಯಲ್ಲಿದ್ದಾರೆ. ಅವರು ಇಲ್ಲಿ ಸ್ವತಃ ಬೆಂಗಳೂರು ನಗರದಲ್ಲಿ ಹಾಡು ಹಗಲೇ ಸುಳ್ಳು ಅಫಿಡವಿಟ್ ಕೊಟ್ಟು ಸರ್ಕಾರಕ್ಕೆ ವಂಚನೆ ಮಾಡಿ, ಮೋಸ ಮಾಡಿ, ಆಸ್ತಿಯನ್ನು, ಸೈಟುಗಳನ್ನೂ, ಮನೆಗಳನ್ನೂ ಮಾಡಿರುವುದು ಇಲ್ಲಿ ಇದೆ. ಇಂಥವರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಬೇರೆಯೋ ಎದ್ದು ಹೋಲ ಮೇಯುವುದಾದರೆ ಕೇಳುವವರು ಯಾರು? ಅವರ ಹೆಸರು ಹಿಂದೆ ಇಲ್ಲಿ ಬಂದಿತ್ತು. ತಮಗೂ ಗೊತ್ತಿದೆ. ಅವರ ಹೆಸರು ಶ್ರೀಮಾನ್ ಬಾಗಲ್ಕೋಟೆಯ ಎಂದು. ಕೋಟ್ಯಾಂತರ ರೂಪಾಯಿಯ ದೊಡ್ಡ ಕಂಪೆನಿ ಇದೆ. ದೊಡ್ಡ ರಾಕೆಟ್ ಇದೆ.

SRI. D. DEVARAJ URS.— The convention is and I think there is a Ruling of the Chair that whenever allegation are made against Officers their names may not be given because they will not be in a position to defend themselves here The Hon. member is making allegations against an officer for ths first time and he says that he is in possession of documentary evidence. Let the hon. Member produce the evidence to us. Withuot giving an opportunity to know what it is. not proper on the part of the Hon. Member to make allegation and speak about the names.

THE CHAIRMAN.— The Hon'ble Chief Minister is quite correct. The hon. Member should avoid names.

ಶ್ರೀ ಕೋಣಂದೂರು ಲಿಂಗಪ್ಪ.— ಮೊದಲು ಹೆಸರು ಹೇಳುವುದಕ್ಕೆ ಹಿಂಜರಿದೆ, ಹೆಸರು ಹೇಳುವುದು ಸರಿಯಲ್ಲ. ನನ್ನ ಹತ್ತಿರ ದಾಖಲಾತಿಗಳಿವೆ. ನೂರಕ್ಕೆ ನೂರೂ ಸತ್ಯ. ದಾಖಲೆಗಳನ್ನು ಸಭೆಯ ಮುಂದಿಡುತ್ತೇನೆ. ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಯ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತಾರೆ? ಪೋಲಿಸ್ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು ಇವತ್ತು ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಕಂಪ್ಲೇಂಟ್ ಕೊಡುವುದಕ್ಕೆ ಹೋದವನನ್ನೇ ಹಿಡಿದು ಹಾಕುವ ಸಂದರ್ಭ ಇದೆ ಎಂದು ರಾಜ್ಯದಲ್ಲಿ ಪೋಲಿಸ್ ಸ್ಟೇಷನ್‌ನಲ್ಲಿ ಪಾಲಿಡಾಲ್ ಇಟ್ಟಿದ್ದೀರ ಅದು ಅಲ್ಲಿ ಹೇಗೆ ಬಂತು? ಮಾನ್ಯ ಸದಸ್ಯರಾದ ರಾಮಸ್ವಾಮಿಯವರ ಕ್ಷೇತ್ರದ ಪೋಲಿಸ್ ಸ್ಟೇಷನ್‌ನಲ್ಲೇ ಇಟ್ಟಿದರು.

ಚೇರ್ಮನ್‌ರವರು.— ಆ ವಿಷಯ ಸಭೆಯಲ್ಲೆ ಹಿಂದೆಯೇ ಬಂದಿತ್ತು.

ಶ್ರೀ ಎಂ, ಬಿ. ರಾಮಸ್ವಾಮಿ.— ಕೆಲವು ಸ್ಟೇಷನ್‌ಗಳಲ್ಲಿ ಪೋಲಿಸ್ ಕಂಪ್ಲೇಂಟ್ ಕೊಡಲು ಹೋದವರನ್ನೇ ಆರೆಸ್ಟ್ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ಎಲ್ಲಾ ಕಡೆಯಲ್ಲೂ ಇದೇ ಸ್ಥಿತಿ ಇದೆ. ನಮ್ಮ ಕ್ಷೇತ್ರದಲೇ ನಡೆದಂಥ ಮರ್ಡರ್ ಕೇಸ್‌ನಲ್ಲಿ ಯಾರು ಮಾಡಿದರು ಎನ್ನುವುದೇ ಪತ್ತೆ ಇಲ್ಲ, ಅವರನ್ನು ಹಿಡಿಯುವುದಕ್ಕೆ ಇನ್ನೂ ಆಗಿಲ್ಲ. ೬ ತಿಂಗಳ ಹಿಂದೆ ನಡು ಚೌಕದಲ್ಲಿ, ಹೋಟೆಲ್‌ನಲ್ಲಿ ಮರ್ಡರ್ ಆಯಿತು. ಮರ್ಡರ್ ಎನ್ನುವುದು ಸಿದ್ಧವಾಯಿತು. ಇವತ್ತೂ ಕೂಡ ಅದಕ್ಕೆ ಯಾರು ಕಾರಣ ಎಂದು ಪತ್ತೆ ಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆಲ್ಲಾ ಕಾರಣ ಮುಖ್ಯ ಮಂತ್ರಿಗಳು ಸ್ವಲ್ಪ ಕಾಲದ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟು ಪೋಲಿಸ್ ಇಲಾಖೆಯನ್ನು ಯಾರೂ ಮುಟ್ಟಲಿಕ್ಕೆ ಹೋಗಕೂಡದು. ಅದು ಎಲ್ಲರಿಗೂ ಮೇಲ್ಪಟ್ಟ ಇಲಾಖೆ ಎಂದು ಹೇಳಿದರು. ಸರ್ಕಾರದ ಮಂತ್ರಿಮಂಡಲ ಏನು ಇದೆ ಆದೂ ಕೂಡ ಇವತ್ತಿನ ದಿವಸ ಪೋಲಿಸ್‌ನವರನ್ನು ತನ್ನ ತಲೆಯ ಮೇಲೆ ಕೂಡಿಸಿಕೊಂಡಿರುವುದನ್ನು ನೋಡಿದರೆ ಇದು ಪ್ರಜಾಪ್ರಭುತ್ವವೇ ಎನ್ನುವ ಅನುಮಾನ ಬರುತ್ತದೆ. ಪ್ರಜೆಗಳ ಈ ಸದನ ಏನಿದೆ ಸರ್ಕಾರದ ಮಂತ್ರಿಮಂಡಲ ಏನಿದೆ ಇದರ ಅಧೀನದಲ್ಲಿ ಅಧಿಕಾರ ವರ್ಗ ಮತ್ತು ಪ್ರತಿಯೊಂದು ಇಲಾಖೆಗೆ ಇರಬೇಕು. ಇವತ್ತಿನ ದಿವಸ ಅಧಿಕಾರ ಕೇಂದ್ರೀಕರಣ ಮಾಡಿ ನಮ್ಮ ಊರಿನ ಒಬ್ಬ ಪೋಲಿಸ್ ಕಾನ್‌ಸ್ಟೇಬಲ್‌ನನ್ನು ಟ್ರಾನ್ಸ್‌ಫರ್ ಮಾಡುವ ಅಧಿಕಾರ ಕೂಡ ಬೆಂಗಳೂರಿನ ಈ ವಿಧಾನಸೌಧದಲ್ಲಿ ತಾವು ಇಟ್ಟು ಕೊಳ್ಳುವುದಾದರೆ ಇದಕ್ಕಿಂತಲೂ ಕೇಂದ್ರೀಕರಣಕ್ಕೆ ಸರ್ವಾಧಿಕಾರ ಪ್ರವೃತ್ತಿಗೆ ಬೇರೆ ಸಾಕ್ಷಿ ಇಲ್ಲ. ಇಲ್ಲಿ ಇರತಕ್ಕ ಅಧಿಕಾರ ಎಲ್ಲೂ ಇಲ್ಲ. ಒಬ್ಬ ಕಾನ್‌ಸ್ಟೇಬಲ್ ತಪ್ಪು ಮಾಡಿದರೆ ಸಾರ್ವಜನಿಕರು, ದೂರು ಕೊಟ್ಟರೆ. ಅಧಿಕಾರಿಗಳಿಗೆ ಮನವರಿಕೆ ಆದರೆ ತಕ್ಷಣ ವರ್ಗ ಮಾಡುವ ಅಧಿಕಾರ ಸ್ಥಳೀಯ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರಿಗೆ ಇರಬೇಕು ಆರೀತಿ ಅಧಿಕಾರ ವಿಕೇಂದ್ರೀಕರಣ ಆಗಬೇಕು.

ಕಡೆಯದಾಗಿ ಪೋಲೀಸ್ ಇಲಾಖೆಯನ್ನು ಪ್ರತ್ಯೇಕವಾಗಿ ಇಟ್ಟು ಅದಕ್ಕೆ ವಿಶೇಷ ಮಹತ್ವ ಕೊಡುವ ಬದಲು ಪ್ರಜೆಗಳ ಕೈಕೆಳಗೆ, ತಾಲ್ಲೂಕಿನ ಒಳಗೆ ದಿರುವ ಪೋಲಿಸ್ ಅಧಿಕಾರಿಗಳು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಪ್ರತಿನಿಧಿಗಳ ಕೈಕೆಳಗೆ ಕೆಲಸ ಮಾಡುವವರು ಆಗಬೇಕು. ಹಾಗೆಯೇ ಜಿಲ್ಲಾ ಪರಿಷತ್ತಿನ ಕೈಕೆಳಗೆ ಜಿಲ್ಲಾ ಪರಿಷತ್ತಿನ ಒಳಗೆ ಇರುವ ಪೋಲಿಸ್‌ನವರು ಇರಬೇಕು. ಹೀಗೆ ಪ್ರಜೆಗಳ

ಕೈಕೆಳಗೆ, ಪ್ರಜೆಗಳ ಆಧೀನದಲ್ಲಿ ಪೋಲಿಸ್ ಇರಬೇಕು. ಪ್ರಜಗಳು ಎಲ್ಲದರಲ್ಲೂ ಸಾರ್ವಭೌಮರು ಆಗಬೇಕು ಅಧಿಕಾರಿಗಳು ಪ್ರಜಗಳ ಮೇಲೆ ಕೂರತಕ್ಕ ಹವಣಿಕೆ ಯೋಗ್ಯವಾದುದಲ್ಲ. ಮೂಲ ಭೂತವಾಗಿ, ಸಂವಿಧಾನ ಬದಲಾವಣೆ ಆಗಬೇಕು ಎನ್ನುವವರು ನಾವು ಅದನ್ನು ಮಾಡುವುದಕ್ಕೆ ತಯಾರಾಗಿ ಆಸೆ ಇಲ್ಲ. ಇಲ್ಲಿ ಮುಖ್ಯವಾಗಿ ಮೂಲಭೂತವಾದ ಬದಲಾವಣೆ ಬಗ್ಗೆ ಹೆಚ್ಚಿನ ವಿಚಾರ ಮಾಡಬೇಕು. ನಾವು ಯಾವ ಒಂದು ಹೊಸ ಹೆಜ್ಜೆಯನ್ನೂ ಇದುವರೆಗೂ ಇಟ್ಟಿಲ್ಲ. ಎನ್ನುವ ಮಾತನ್ನು ವಿಷಾದದಿಂದ ಹೇಳುತ್ತೇನೆ.

(*Madam Speaker in the Chair*)

ಇನ್ನು ಕಡೆಯದಾಗಿ ಎಕ್ಸೈಜ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈಗ ಜಿಲ್ಲಾ ಮತ್ತು ತಾಲ್ಲೂಕವಾರು ಹರಾಜು ಹಾಕುವ ಪದ್ಧತಿ ಏನಿದೆ ಅದನ್ನು ತಪ್ಪಿಸಿ ಅಂಗಡಿವಾರು ಹರಾಜು ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟ್ಯಾಪರ್ಸ್ ಎಂದು ಏನಿದ್ದಾರೆ ಅವರ ಹಿತರಕ್ಷಣೆ ಮಾಡುವುದರ ಬಗ್ಗೆ ಸರ್ಕಾರದವರು ಹೆಚ್ಚಿನ ವಿಶೇಷವಾದ ಆಸಕ್ತಿಯನ್ನು ವಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇವರ ಶೋಷಣೆ ಕಂಟ್ರಾಕ್ಟರ್‌ಗಳಿಂದ ಮತ್ತು ಬಂಡವಾಳಷಾಹಿಗಳಿಂದ ಅವ್ಯಾಹತವಾಗಿ ನಡೆಯುತ್ತಿದೆ. ಮೂರ್ತೆದಾರರು ಮರಗಳಿಂದ ಇಳಿಸತಕ್ಕಂಥ ಹೆಂಡಕ್ಕೆ ಸಾಲ್ಕಾಣೆ ಅಥವಾ ಎಂಟಾಣೆ ಕೊಟ್ಟು, ಅದನ್ನು ಕಂಟ್ರಾಕ್ಟದಾರರು ಒಂದೂವರೆ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ, ಆದಕಾರಣ ಕೇರಳದ ರೀತಿಯಲ್ಲಿ ಇವರ ಹಿತರಕ್ಷಣೆ ಮಾಡುವುದಕ್ಕೆ ವಿಶೇಷ ಆಸಕ್ತಿ ಯನ್ನು ಸರ್ಕಾರದವರು ವಹಿಸಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†SRI R. DAYANANDA SAGAR (Chamarajpet).—Madam Speaker, I have come across a scandal this morning which is still in the incubation and as the member of this House, I thought it fit and proper to bring it to the notice of the Hon. Chief Minister on the one hand and the Hon'ble House on the other. This is a scandal concerning a crawl of Rs 20 lakhs. If it is not amended immediately, situation would go away. You know that Excise Auctions have been taking place everywhere in the State and it is always the rich, the powerful and the strong combines that succeed. We have with greatest sacrifice and service in mind that we have come forwapd to serve the society and the country with an assurance that we will put down the rich, that we will put down the capitalists who are exploiting the society and we have come forward to serve the poor and the really unpotected people. What is going to happen might be different but if it is not averted in time, the conseqaences would be far reching. To my knowledge, it appears that the auction has fetched good lot of money than what was fetched last year in other districts excepting my City and the suburbs. That there is going to be a loss of nearly Rs. 10 lakhs per month if the present auction sale is approved by the Government. Last year, Madam, the auction stood and approved at Rs. 35 lakhs and this time it appears that all the toddy and arrack big wigs combined together did not allow the bid to go on and the hammer was downed only at Rs. 25 lakhs thereby resulting in a loss of Rs. 10 lakhs per mensem which might amount to a crore and twenty lakhs in a year. I am told Madam that this has not been approved—this is subject to the approval of the Government. If the Government do not approve it for good reasons, they can re—auction it ; or, I would suggest that they may sell

(SRI R, DAYANADA SAGAR)

shopwise or auction shopwise. It appears an attempt to auction shopwise also took place, but small contractors did not come farward. Why ? As I have told you, these Toddy Kings, Arrack Kings in the State when they come forward, it would be very difficult for the small constractors to bid in their presente. The small contractors therefore do not come forward. They have to be protected. The Congress Party has com forward to protect that commonman—the poor man. Let us establish fair price shops as has been done in the case fo food grains. Lot us establish fair price shops where arrack and toddy might be sold. Lat the ordinary man come forward; we will give him a reaso nable commission if he carries out the sale of arrack and toddy. Now as the candal goes, I do not know how for it is true, it is for the Chief Minister to explain to us what has happened, I appears to me that a middle—man, some broker, is going about, saying that he is going to get the Government sanction if he is given Rs. 20 lakhs and the rumour goes as I understand that Rs. 15 lakhs has already been offered. If such rumours are not nipped in the bud, it is not good for my party which has com forward to serve that commonman, the underdog, the poor and the humble people. Therefere this has to be looked into and justice be done in terms of helping really the humble and unprotected people. I would a suggest, if that be the case, the approval of the Government should not be given. If that is given it would become a subject—matter of discussion in the Congress party and elsewhere.

Now Madam, I would like to speak a few words regarding General Administration of the State. Our administration has been going the same way as at the time of the British period. I have been living in this City since my boyhood. While I was a student. I have seen the red—tapism, inefficiency of the administration. As a young boy then I went round the country and lectured to the people that if freedom is given to our people ; we are going to get our own administration we are going to bring plenty to our people ; we are going to asure good administration and there will be milk and honey flowing in the streets of our nation. This is the assurance we gave to our people. Now people ask us what sort of Government you are administering We had seven ministries including Sri Kadidal Manjappa's Ministry. Sri Reddy's Cabinet was there, Sri Hanumanthaiya's Jatti's, Nijalingappa's, Veerendra Patil's and now Sri Devaraj Urs Ministry is there. The achievements and progress of each Ministry will be judged by the people. There are the only things that would be remembered by the people. If the Governmen is good or bad, if the Government is doing this way or that way, that will not at all be the considera-ticn, but what are the achievments of the Ministry will remain for evect. Polices and programmes of the party are next to the

administration. I ask have we given good administration to the people ? First of all we have to give a clean and good Government. We have to search our hearts whether we have given a good administration to our country. To this extent we have got to focus our attention. Our Chief Minister, the other Ministers and the members of this House are more responsible to this State as well as to this nation and the people. Have we given good Goveramett to the people free from all comments ? Of course, we do not care for gossips. If people make false charges, we will tear them into pieces. If the charger are true, if there is a semblance of truth in the charges, then we have to search our hearts and see that there is a clean and better administration.

Madam Speaker we are wedded to socialism, secularism and democracy. We have got to foster them. In a State like ours we have adopted socialistic principles—rich cannot grow richer and poor cannot be allowed to go poorer. We have adopted socialistic principles—rice cannot grow richer and poor cannot be allowen to go poorer. We have a hold over this Police and the Police should be hanest and should protect law and order of the State. This Department is the important Department to bring credir or discredit to the Government. The administration must be clean free from shady doubts, and shady dealings. I am told that a land measuring 200 'x200' has been given to a Mill owner. The land is the public property and it is meant for public utility. The Krishna Mill owner, who is in allianed with the auhority in power has got this site. When the people are not getting land for constructing houses for living purpose, this Mill owner has got the land easily. Further, Madam Speaker I am told that a son-in-law of a Minister is also allotted a site for wrestling Association. It is a heinous crime. It is difficult to face the public criticism when the people ask us this question. I do not understand why such people are being given lands which are ment for public utility. Insted of giving this land measuring 200′ × 206′ to this wvestling Association the same could have been utilised for any public purpese.

SRI D. DEVARAJ URS.—The Hon. Member is not well informed. The wrestling Association is a public Association and it is not an Association belonging to any individual. The State Government has got a policy to enconrage wrestling and sports activities in the State. If the Hon. Member thinks that it is givien to a son-in-law of a Minister, it is wrong. Before making any statement on the floor of the Assembly, kindly verify the facts before-hand. It is not given to a son-in-law or Hon. Minister of the any relative or any brother-in-law or Cabinete

SRI R. DAYANANDA SAGAR.—If it is not true I take back my words. According to the information I got, I thought it may be a

(SRI R. DAYANAND SAGAR)

fact and I have brought it for the information of the House. If it is not so, I am sorry I am taking it back.

SRI D. DEVARAJ URS.—If you want you can verify the facts.

SRI R. DAYANANDA SAGAR.—If it is given for public utility, it is alright. I will take back the words. Madam Speaker I do not take much time of the House. I would like to confine myself to one or two points and finish my speech.

I want to say a few words about the police administration and also the cabinet administration. In the Cabinet administration, I am told that one or two Ministers of State have no work at all, It is not correct on the part of the Government to keep them idle without doing any work. people are paying taxes. We dont want to pay unnecessarily to anybody without getting the work done by him. The Minister for Municipal administration and the Health Minister of State have no work. It is wrong on the part of the Chief Minister to allow them to be in the Ministry without doing any work at all. Otherwise we will be wasting the general fund of the State. I request the Chief Minister to remove them from service.

SRI M. S. KRISHNAN.—A principle of no work and no pay is to be adopted.

SRI R. DAYANANDA SAGAR.—The Police is there to protect law and order. Every body expects that the police man should be a friend, philosopher and a guide. But I do not find any Police man true to these principles. These Policemen are observing these principles in breach. They are found in collection centres, They collect money from everybody. Whoever gives more money will get justice at the hands of the Police. people in my constrituency come and tell me hundreds of cases of this type. Even in couples quarrels the police play mischief. If the wife gives money ask the police to do something for her. the husband will be called for. If the husband pays more money than his wife, the wife will be called for. Who ever pays more money will get better treatment in the police Station. About catching the loaded lorries and buses, the Police is making mint out of it They collect huge sums of money from them and allow them to go. if anybody does not pay, they will book him and a case will be filed next day. By paying to Police you can get anything done in your favour. Poor man cannot get justice at the hands of the police. It the Government wants to get good name, the police Department must be geared up and effiiciency must be improved. The police must be above suspicion. If the law and order is gone everything is gone, gone and gone. I call upon the concerned Minister to set it right. with these words I close my speech. Thank you.

ಶ್ರೀ ಎಂ. ನಂಜೇಗೌಡ (ಗಂಡಸಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಈಗ ನನಗೆ ಇರತಕ್ಕ ಕಡಿಮೆ ಕಾಲಾವಕಾಶದಲ್ಲಿ ಪೋಲೀಸ್ ಇಲಾಖೆಯ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಇರತಕ್ಕ ನೌಕರರ ಬಗ್ಗೆ ಎಲ್ಲರೂ ಸೇರಿ ದೂರತಕ್ಕದ್ದು ನನಗೆ ಅಷ್ಟು ಸಾಧುವಾಗಿ, ಉತ್ತಮವಾಗಿ ಕಾಣುವುದಿಲ್ಲ. ದೇಶದಲ್ಲಿರತಕ್ಕ ಈ ನೌಕರ ವರ್ಗದಲ್ಲಿ ಬಹುಪಾಲು ಜನ ನಿಷ್ಠಾವಂತರಿದ್ದಾರೆಂಬುದನ್ನು ಮನಸಿನಲ್ಲಿಟ್ಟುಕೊಂಡು ಇರತಕ್ಕ ಸಣ್ಣ ಪುಟ್ಟ ದೂರುಗಳನ್ನು ದೊಡ್ಡದು ಮಾಡಿ ಹೇಳತಕ್ಕದ್ದು ಅಷ್ಟು ಒಳ್ಳೆಯದಾಗುವುದಿಲ್ಲ ಎಂದು ನಾನಾದರೂ ಹೇಳುತ್ತೇನೆ. ಈಗಿನ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಇಲಾಖೆಯನ್ನು ಸುಧಾರಣೆ ಮಾಡುವ ಬಗ್ಗೆ ಬಹಳ ಉತ್ಸುಕತೆಯನ್ನು ತೋರಿಸಿದ್ದಾರೆ. ಹಿಂದೆ ಯಾವ ಸರ್ಕಾರವೂ ಕೂಡ ಗಮನ ಕೊಡದೇ ಇರತಕ್ಕ ಬೇನಾಮಿ ಅರ್ಜಿಗಳಿಗೆ ಗಮನವನ್ನು ಕೊಟ್ಟು ಅನೇಕ ಆಫೀಸರುಗಳನ್ನು ಶಿಕ್ಷೆಗೆ ಗುರಿಪಡಿಸಿದ್ದಾರೆಂಬುದನ್ನು ನಾವು ನೋಡಬಹುದಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಹಾಸನಾ ಘಟನೆಯಲ್ಲಿ ಏನಾಯಿತು ?

ಶ್ರೀ ಎಂ. ನಂಜೇಗೌಡ.—ದೇಶದ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡತಕ್ಕವರು ಯಾವ ರೀತಿ ನಡೆದುಕೊಂಡರೂ ತಪ್ಪು. ಹಾಸನದಲ್ಲಿ ನಡೆದ ಘಟನೆಯನ್ನು ದೊಡ್ಡದು ಮಾಡಿ ದೇಶದಲ್ಲಿ ಗುಲ್ಲೆಬ್ಬಿಸಿದುದರ ಫಲವಾಗಿ ಅನ್ಯಾಯವಾಗಿ ಅಧಿಕಾರಿಗಳನ್ನು ದೂರಿದ್ದಾರೆ. ಅದು ಸಾಧುವಲ್ಲ. ದೇಶದಲ್ಲಿ ನಡೆದಂತಹ ಘಟನೆಯಿಂದ ಲಕ್ಷಾಂತರ ರೂಪಾಯಿಗಳು ಕೋಟ್ಯಾಂತರ ರೂಪಾಯಿಗಳು ನಷ್ಟವಾಯಿತು ಎಂಬುದನ್ನು ಮರೆಯಬಾರದು. ಆದರೆ ಅಲ್ಲಿ ನಿಜವಾಗಿ ನಡೆದುದು ಏನು ಎಂಬುದನ್ನು ಪರಿಶೀಲನೆ ಮಾಡಬೇಕು. ಆದರಿಂದ ಏನಾಯಿತು ಎಂಬುದನ್ನು ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಹಾಸನದಲ್ಲಿ ನಡೆದಂತಹ ಘಟನೆ ಆದಮೇಲೆ ಜನ ಸರ್ಕಾರಿ ಅಧಿಕಾರಿಗಳ ಬಗ್ಗೆ ಇಲಾಖೆಯ ಬಗ್ಗೆ ಒಂದು ರೀತಿಯಿಂದ ಅವರು ಪಕ್ಷಪಾತ ಭಾವನೆಯಿಂದ ವರ್ತನೆ ಮಾಡಿದರೂ ಎನ್ನುವ ವಿಚಾರ ಅಧಿಕಾರಿಗಳಲ್ಲಿ ಕಂಡುಬಂದು ಇಡೀ ಜಿಲ್ಲೆಯಲ್ಲಿ ಪೋಲೀಸಿನವರು ನಿಷ್ಕ್ರಿಯವಾಗಿ ಕೆಲವು ಕಾಲ ಇದ್ದರು ಎಂಬುದನ್ನು ನಾನು ಸರ್ಕಾರಕ್ಕೆ ತಿಳಿಸುತ್ತೇನೆ. ಇವೊತ್ತಿನ ದಿವಸ ಹಾಸನ ಜಿಲ್ಲೆಯಲ್ಲಿ ಹಾಸನಾ ಟೌನಿನಲ್ಲಿ ಪೋಲೀಸ್ ಇಲಾಖೆಯಲ್ಲಿರತಕ್ಕ ನೌಕರರು ಧೈರ್ಯದಿಂದ ದುಷ್ಟ ಶಕ್ತಿಗಳ ಶಿಕ್ಷೆಯ ಬಗ್ಗೆ ಕಾರ್ಯ ವಿಮುಖರಾಗತಕ್ಕಂಥಾ ಪರಿಸ್ಥಿತಿ ಕೇಳಿ ಬರುತ್ತಿದೆ. ಆದ್ದರಿಂದ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ ದಯವಿಟ್ಟು ಇಲಾಖೆಯ ಮುಖ್ಯ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಲ್ಲಿ ಕಾನೂನಿಗೆ ವಿರೋಧವಾಗಿ ನಡೆಯುತಿರತಕ್ಕ ಚಟುವಟಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ಕಠಿಣವಾಗಿ ಮಟ್ಟ ಹಾಕತಕ್ಕ ರೀತಿಯಲ್ಲಿ ಸೂಚನೆಯನ್ನು ಕೊಡಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ರಿಜರ್ವ್ ಪೋಲೀಸಿನವರನ್ನು ಇಟ್ಟುಕೊಂಡಿರತಕ್ಕ ರೀತಿಯನ್ನು ಬದಲಾವಣೆ ಮಾಡಿ ಸುಧಾರಣೆ ಮಾಡಬೇಕು. ಗಲಾಟೆಯಾಗತಕ್ಕಂಥಾ ಸಂದರ್ಭದಲ್ಲಿ ಈ ರಿಜರ್ವ್ ಪೋಲೀಸಿನವರನ್ನು ಕರೆಸಿ ಜನಗಳನ್ನು ಹೊಡೆಸುವುದಕ್ಕೆ ಇವರನ್ನು ಇಟ್ಟುಕೊಂಡಿದ್ದಾರೆ ಎನ್ನುವ ಒಂದು ಭಾವನೆ ಇದೆ. ಆದ್ದರಿಂದ ಅವರನ್ನು ಕೇವಲ ಗಲಾಟೆಯಾದಂಥ ಸಂದರ್ಭದಲ್ಲಿ ಮಾತ್ರ ಕರೆದುಕೊಂಡು ಬಂದು ಶಾಂತಿ ಪಾಲನೆ ಮಾಡಬೇಕೆಂದು ಹೇಳುವುದಕ್ಕೆ ಬದಲಾಗಿ ಉಳಿದ ಸಂದರ್ಭಗಳಲ್ಲೂ ಸಹ ರಿಜರ್ವ್ ಪೋಲೀಸ್ನವರು ಬಂದು ಸ್ಥಳೀಯ ಜನರ ಗುರುತನ್ನು ಇಟ್ಟುಕೊಂಡು, ಗಲಾಟೆಯಾಗುವ ಸಂದರ್ಭದಲ್ಲಿ ಯಾರು ಸೌಜನ್ಯದಿಂದ ವರ್ತಿಸುತ್ತಾರೆ, ಯಾರು ಉತ್ತಮರು ಎಂಬುದನ್ನು ಗಮನಿಸಿ ಪ್ರಜೆಗಳಿಗೆ ಸಮರ್ಪಕವಾಗ ರೀತಿಯಲ್ಲಿ ಅವರು ಹೊಂದಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

4-30 P. M.

ಇನ್ನು ಇಲಾಖೆಗಳಲ್ಲಿ ಬರತಕ್ಕ ದೂರನ್ನು ನಿಷ್ಪಕ್ಷಪಾತವಾಗಿ ವಿಚಾರ ಮಾಡಬೇಕು. ಹಿಂದಿನ ಸರ್ಕಾರ ಇದ್ದಂಥ ಕಾಲದಲ್ಲಿ ನುಗ್ಗೇಹಳ್ಳಿಯಲ್ಲಿ ಕೆಲವು ಒಳ್ಳೆಯ ವ್ಯಕ್ತಿಗಳ ಮೇಲೆ ನಡೆದಂಥ ಕೊಲೆಯ ಸಂಬಂಧದಲ್ಲಿ ಇಡೀ ವಿರೋಧ ಪಕ್ಷದ ಜನರು ಸರ್ಕಾರಕ್ಕೆ ಮೊರೆ ಇಟ್ಟರೂ ಒಬ್ಬ ಸಬ್ ಇನ್ಸ್‌ಪೆಕ್ಟರನ್ನೂ ಸಹ ಅಲ್ಲಿಂದ ಟ್ರಾನ್ಸ್‌ಫರ್ ಮಾಡಲಿಲ್ಲ. ಅಂತಹ ಸಂದರ್ಭಗಳು ಅನೇಕ ಇವೆ. ಇಂತಹ ಕೇಸುಗಳಲ್ಲಿ ನ್ಯಾಯ ಅಥವಾ ಅನ್ಯಾಯಗಳನ್ನು ಸರಿಯಾಗಿ ವಿಚಾರ ಮಾಡದೆ, ತಪ್ಪು ಯಾರದೆಂಬುದನ್ನು ಮನಗಾಣದೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಇವರಲ್ಲ ಶಿಸ್ತು ಬಹಳವಾಗಿ ಕಡಿಮೆಯಾಗಿದೆಯೆಂದು

(ಶ್ರೀ ಎಂ. ನಂಜೇಗೌಡ)

ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಇನ್ನು ಈ ಇಲಾಖೆಯಲ್ಲಿ ಇರತಕ್ಕ ಹೆಡ್ ಕಾನ್‌ಸ್ಟೇಬಲ್‌ಗಳ ವಿಷಯ. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಇವರಲ್ಲಿ ಅತಿ ವಿದ್ಯಾವಂತರು ಯಾರೂ ಇಲ್ಲ. ಹಿಂದೆ ನೇಮಕವಾದಂತಹವರು ಬಹಳ ಕಡಿಮೆ ವಿದ್ಯಾವಂತರು ಇದ್ದಾರೆ. ಸರ್ವಿಸ್ ಮೇಲೆ ಅವರು ಹೆಚ್ಚಿನ ಸ್ಥಾನವನ್ನು ಗಳಿಸಿದ್ದಾರೆ. ಹೆಡ್ ಕಾನ್‌ಸ್ಟೇಬಲ್ಸ್ ಎಲ್ಲಾ ಸ್ಟೇಷನ್‌ಗಳಲ್ಲಿಯೂ ಇದ್ದಾರೆ. ಅವರನ್ನೇ ಸರ್ಕಾರ ನೇರವಾಗಿ ನೇಮಕಾತಿಗಳಲ್ಲಿಯೂ ಅವರ ಮಾರ್ಗದರ್ಶನ ಬೇಕೆಂದು ಕೇಳಬೇಕಾಗುತ್ತದೆ. ಕೇಸುಗಳನ್ನು ರುಜುವಾತು ಮಾಡುವುದು, ಅದನ್ನು ಕಂಡಕ್ಟ್ ಮಾಡುವ ವಿಚಾರದಲ್ಲಿಯೂ ಅವರನ್ನೇ ಕೇಳಬೇಕಾಗುತ್ತದೆ. ಆದ್ದರಿಂದ ಹೆಡ್ ಕಾನ್‌ಸ್ಟೇಬಲ್‌ಗಳನ್ನು ಇನ್ನು ಮುಂದೆ ಹೆಚ್ಚು ವಿದ್ಯಾವಂತರಾಗಿರುವವರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಈ ಇಲಾಖೆಯನ್ನು ಸುಧಾರಣೆ ಮಾಡುವುದು ಬಹಳ ಕಷ್ಟವಾಗುತ್ತದೆ. ಹಿಂದಿನ ಕಾಲದಿಂದಲೂ ಒಂದು ರೀತಿಯಲ್ಲಿ ಇದು ನಡೆದುಕೊಂಡು ಬಂದಿರುತ್ತದೆ. ಅಲ್ಲಿಗೆ ಬರತಕ್ಕ ಎಲ್ಲಾ ಅಧಿಕಾರಿಗಳನ್ನೂ ತಮಗೆ ತೋಚಿದ ರೀತಿಯಲ್ಲಿ ಮಾಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶವನ್ನು ಮಾಡಿಕೊಡುತ್ತಿದ್ದಾರೆ.

ಇನ್ನು ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ದುದ್ದಾ ಪೋಲೀಸ್ ಸ್ಟೇಷನ್ನಿನಲ್ಲಿ ಒಂದು ವರ್ಷದಿಂದಲೂ ಸಬ್ ಇನ್‌ಸ್ಪೆಕ್ಟರ್ ಇಲ್ಲ. ಹಿಂದೆ ಇಲ್ಲಿಗೆ ಬಂದಿದ್ದವರೂ ಕೂಡ ಒಂದು ಸಣ್ಣ ಅಪರಾಧದ ಮೇಲೆ ಸಸ್‌ಪೆಂಡ್ ಆಗಿದ್ದಾರೆ. ಈಗಿರತಕ್ಕ ಒಬ್ಬ ಕಾನ್‌ಸ್ಟೇಬಲ್ಲೇ ಸಹ ಆಂಟಿ ಕರಪ್ಷನ್ ಇಲಾಖೆಯವರು ಲಂಚದ ಅಪಾದನೆಯ ಮೇಲೆ ಅವರನ್ನು ಸಸ್‌ಪೆಂಡ್ ಮಾಡಬೇಕೆಂದಿದ್ದಾರೆ. ಆದ್ದರಿಂದ ಈ ಪೋಲೀಸ್ ಸ್ಟೇಷನ್ನಿಗೆ ಸಬ್ ಇನ್‌ಸ್ಪೆಕ್ಟರನ್ನು ಪೋಸ್ಟ್ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈ ಇಲಾಖೆಯ ಮುಖ್ಯಾಧಿಕಾರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಯನ್ನು ಸುಧಾರಣೆ ಮಾಡಬೇಕೆಂದು ಬಹು ಹೆಚ್ಚಿನ ಆಸಕ್ತಿಯಿಂದ ಇದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ಇಲಾಖೆಗೆ ರೆಕ್ರೂಟ್‌ಮೆಂಟ್ ಮಾಡುವ ಕಾಲದಲ್ಲಿ ಕಾನ್‌ಸ್ಟೇಬಲ್‌ನಿಂದ ಹಿಡಿದು ಮೇಲ್ಪಟ್ಟದ ಅಧಿಕಾರಿಯವರೆಗೂ ಹೆಚ್ಚಿನ ಸಂಬಳ ಸಾರಿಗೆಗಳನ್ನು ಕಲ್ಪಿಸಿ ಕೊಟ್ಟು ವಿದ್ಯಾವಂತರನ್ನು ಹೆಚ್ಚಿಗೆ ಆಕರ್ಷಣೆ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ನನಗೆ ಈ ಒಂದು ಸಂದರ್ಭದಲ್ಲಿ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಚರ್ಚೆಯಾಗಿ ೧೫ ದಿವಸಗಳ ಮೇಲೆ ಆಗಿದೆ. ಅವತ್ತೇ ನಾನು ಉತ್ತರ ಕೊಡುವುದಕ್ಕಾಗಲಿಲ್ಲ. ನಮ್ಮ ಎದುರುಪಕ್ಷದ ಕೆಲವು ಸದಸ್ಯರುಗಳು ಅಂದೇ ಪೂರೈಸಬೇಕಾಗಿದ್ದಂಥ ಚರ್ಚೆಯನ್ನು ೧೫ ದಿವಸಗಳವರೆಗೆ ಮುಂದುವರಿಸಿದ್ದರಿಂದ ಈಗ ಆ ದಿವಸದಲ್ಲಿ ಆದಂಥ ಚರ್ಚೆಗಳು ಏನೇನು ಎಂಬುದನ್ನು ಮರೆತುಹೋಗಿದ್ದೇನೆ. ಮಾನ್ಯ ಶ್ರೀ ದೇವೇಗೌಡರು ಒಂದೆ ಚರ್ಚೆಯಲ್ಲಿ ಭಾಗವಹಿಸಿದ್ದರು. ಆಗ ಅವರು ಹೇಳಿದ್ದನ್ನೆಲ್ಲಾ ಪುನಃ ಈಗ ನಾನು ಜ್ಞಾಪಿಸಿಕೊಳ್ಳುತ್ತಿದ್ದೇನೆ. ನಾನು ಈಗ ಕೇಳಿರುವುದು ಮೊಟ್ಟಮೊದಲು ನನ್ನ ಮನಸ್ಸಿನಲ್ಲಿ ಉಳಿದಿದೆ. ನಾನು ಬೇರೆ ಎಲ್ಲ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಈ ಚರ್ಚೆಯಿಂದ ನನಗೆ ಬಂದ ಅನುಭವವನ್ನು ಎರಡು ಮಾತುಗಳಲ್ಲಿ ಹೇಳುತ್ತೇನೆ. ಈ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ಕೆಲವು ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳನ್ನು ಸರ್ಕಾರದವರು ಸ್ವೀಕರಿಸಿ ವಿಚಾರಮಾಡಬೇಕೆಂದು ಈ ಸಭೆಯಲ್ಲಿ ಹೇಳಿದ್ದಾರೆ. ಅವರು ಆಡಳಿತ ಯಾವ ರೀತಿಯಲ್ಲಿ ನಡೆಯುತ್ತಿದೆಯೆಂಬುದನ್ನು ಬಹಳ ತೀವ್ರವಾಗಿ ನೋಡುತ್ತಿದ್ದಾರೆ ಮತ್ತು ಬಹಳ ಎಚ್ಚರಿಕೆಯಿಂದ ವೀಕ್ಷಣೆ ಮಾಡುತ್ತಿದ್ದಾರೆನ್ನುವ ವಿಚಾರ ಈಗ ಹೊರಬಿದ್ದಿದೆ. ಅದಕ್ಕಾಗಿ ಅಂತಹ ಮಾನ್ಯ ಸದಸ್ಯರಿಗೆ ನಾನು ಧನ್ಯವಾದಗಳನ್ನು ಹೇಳಲೇಬೇಕು. ಈ ತರಹ ಟೀಕೆಗಳನ್ನು ಮಾಡುವುದರಿಂದ ಕೆಲವು ಸಂದರ್ಭಗಳಲ್ಲಿ ಅನುಕೂಲ ಉಂಟು. ಮಾನ್ಯ ಸದಸ್ಯರು ಬಹಳ ಜಾಗೃತರಾಗಿ ಸರ್ಕಾರದ ಕೆಲಸಕಾರ್ಯಗಳನ್ನು ಮೂಲೆ ಮೂಲೆಗಳಲ್ಲಿ ಏನೇನು ಆಗುತ್ತಾ ಇದೆಯೆಂಬುದನ್ನು ನೋಡುತ್ತಾ ಇರುವುದು ಬಹಳ ಜವಾಬ್ದಾರಿಯುತವಾದ ಕಾರ್ಯವಾಗಿದೆ. ಅಂತೂ ಅವರು ಟೀಕೆಗಳನ್ನು ಮಾಡುವುದನ್ನು ನಾನು ಖಂಡಿತವಾಗಿಯೂ ಸ್ವೀಕಾರ ಮಾಡುತ್ತೇನೆ. ಅದರ ಬಗ್ಗೆ ನನಗೆ ಬೇಜಾರು ಇಲ್ಲ. ನನ್ನ ಜವಾಬ್ದಾರಿಯೂ ಕೂಡ ಅಂತಹ ಟೀಕೆಗಳನ್ನು ಸ್ವೀಕರಿಸಬೇಕೆಂಬುದಾಗಿದೆ. ಎಲ್ಲೆಲ್ಲಿ ದೋಷಗಳಿವೆಯೋ ಅವುಗಳನ್ನು ನೋಡಬೇಕಾದುದು ನನ್ನ ಕರ್ತವ್ಯ. ನಮಗೆ ಅವರು ಎಚ್ಚರಿಕೆ ಕೊಡುವುದು ಯೋಗ್ಯವಾಗಿದ್ದರೆ ಅದನ್ನೂ ಕೂಡ ಸ್ವೀಕಾರಮಾಡೋಣ. ಆದರೆ

ಬಹುಮಂದಿ ಮಾತನಾಡಿದ್ದರೂ ಅವರಿಗೆ ವಿಷಯಗಳ ಸಮರ್ಥನೆ ಇಲ್ಲ. ಅವರು ಮಾತ್ರಕ್ಕಾಗಿ ಕೆಲವು ಮಾತುಗಳನ್ನು ಹೇಳಬೇಕೆಂದು ಹೇಳುವ ರೀತಿಯಲ್ಲಿ ಅವರು ಇಲ್ಲಿ ಮಾತನಾಡಿದ್ದಾರೆ. ಅವರಿಗೆ ವಿಷಯಗಳು ಚೆನ್ನಾಗಿ ಗೊತ್ತಿರಲಿ, ಗೊತ್ತಿಲ್ಲದೆ ಇರಲಿ, ಜನಕ್ಕೆ ನಷ್ಟ ಇರಲಿ, ಇಲ್ಲದೇ ಹೋಗಲಿ, ಅಂತೂ ಮಾತನಾಡಬೇಕೆಂಬ ಕೆಲವಾರು ವಿಷಯಗಳನ್ನು ಹೇಳಿದ್ದಾರೆ. ಈ ರೀತಿಯಾದ ಮಾತುಗಳಿಂದ ಅವರಿಗೂ ಪ್ರಯೋಜನವಿಲ್ಲ, ಈ ಮನೆಗೂ ಪ್ರಯೋಜನವಿಲ್ಲ, ಸರ್ಕಾರಕ್ಕೂ ಪ್ರಯೋಜನವಿಲ್ಲ. ಇಂಥಹ ಮಾತುಗಳೇ ಈಗ ಹೆಚ್ಚಿಗೆ ಬರುತ್ತಿವೆ. ಇನ್ನು ಇತ್ತೀಚೆಗೆ ಆಡಳಿತ ದಿನೇ ದಿನೇ ಜಟಿಲವಾಗುತ್ತಿದೆಯೆಂದು ಹೇಳಿದರು. ೧೯೫೨ನೇ ಇಸವಿಯಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಎರಡೂವರೆ ಕೋಟಿ ರೂಪಾಯಿಗಳ ಬಡ್ಜೆಟ್ ಇತ್ತು. ನಾನು ಅಸೆಂಬ್ಲಿ ಸದಸ್ಯನಾದಾಗ, ನಾನು ಪ್ರಥಮತಃ ಈ ಸಭೆಗೆ ಬಂದಾಗ ಸುಮಾರು ೬ ಕೋಟಿ ರೂಪಾಯಿಗಳಷ್ಟು ಬಜೆಟ್ ಇತ್ತು ಎಂಬುದಾಗಿ ಹೇಳಬಹುದು. ೧೯೫೬ನೇ ಇಸವಿಯಲ್ಲಿ ನಮ್ಮ ರಾಜ್ಯ ವಿಶಾಲವಾದಾಗ ಸುಮಾರು ೨೫-೩೦ ಕೋಟಿ ರೂಪಾಯಿಗಳಷ್ಟು ಬಡ್ಜೆಟ್ ಇತ್ತು. ಹಿಂದೆ ೬ ಕೋಟಿ ರೂಪಾಯಿಗಳಲ್ಲಿ ಒಂದೂವರೆ ಕೋಟಿ ರೂಪಾಯಿಗಳಷ್ಟು ವರಮಾನ ಕೇವಲ ಲ್ಯಾಂಡ್ ರೆವಿನ್ಯೂ ಬಾಬಿನಿಂದಲೇ ಬಂದಿದೆ. ಇನ್ನುಳಿದ ಒಂದೂವರೆ ಕೋಟಿ ರೂಪಾಯಿಗಳ ವರಮಾನ ಬೇರೆ ಬಾಬುಗಳಿಂದ ಬಂದಿದೆ. ಇವತ್ತು ಕೇವಲ ಎರಡು ದಶಕಗಳಲ್ಲಿ ಎಷ್ಟು ಬದಲಾವಣೆಯಾಗಿದೆಯೆಂದರೆ ಕೇವಲ ೨೫ ಕೋಟಿ ರೂಪಾಯಿಗಳಲ್ಲ, ಅದು ೪೦೦-೫೦೦ ಕೋಟಿ ರೂಪಾಯಿಗಳಿಗೆ ಹೋಗುತ್ತಿದೆ. ಆಗ ಅಧಿಕಾರಿಗಳ ಸಂಖ್ಯೆ ಕೇವಲ ಸಾವಿರಗಟ್ಟಲೆ ಇತ್ತು. ಈಗ ಲಕ್ಷಗಟ್ಟಲೆ ಅಧಿಕಾರಿಗಳ ಸಂಖ್ಯೆ ಇದೆ. ಮತ್ತೆ ಎಲ್ಲಾ ಇಲಾಖೆಗಳಲ್ಲಿಯೂ ಕೆಲಸ ಆಗ ಬಹಳ ಕಡಿಮೆ ಇತ್ತು. ಈಗ ಎಲ್ಲ ಇಲಾಖೆಗಳಲ್ಲಿಯೂ ಸರ್ಕಾರದ ಕೆಲಸ ಕಾರ್ಯಗಳೂ ಕೂಡ ಬಹಳ ಜಾಸ್ತಿ ಆಗಿದೆ. ಯಾವುದೋ ಒಂದು ಕಾಲದಲ್ಲಿ ಇದ್ದಂಥ ಸರ್ಕಾರದಲ್ಲಿ ಹಿಂದೆ ಇದನ್ನು ಪೋಲೀಸ್ ಸ್ಟೇಟ್ ಎಂಬುದಾಗ ಹೇಳುತ್ತಿದ್ದರು. ಆಗ ಕೇವಲ ರಕ್ಷಣೆ ಲಾ ಅಂಡ್ ಆರ್ಡರ್ ಮೇಂಟೆನೆನ್ಸ್ ಮಾತ್ರ ಇತ್ತು. ಇನ್ನು ಬಾಕಿ ಕೆಲಸಗಳನ್ನು ದಿವಾನರು, ಮತ್ತು ಮಂತ್ರಿಗಳೇ ಮಾಡುತ್ತಿದ್ದರು. ಯಾರಾದರೂ ಒಂದು ಸ್ಕೂಲ್ ಕಟ್ಟಿಸಿಕೊಡಬೇಕೆಂದು ಕೇಳಿದರೆ, ಅದನ್ನು ಸರ್ಕಾರ ಮಾಡಿಕೊಟ್ಟರೆ ಅದೇ ಒಂದು ದೊಡ್ಡ ಹೆಮ್ಮೆಯ ವಿಚಾರ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಜ್ಞಾಪಿಸಿಕೊಂಡು ಈ ಸಭೆಯಲ್ಲಿ ಹೇಳಬೇಕಾಗಿದೆ. ನಾನು ನನ್ನ ಊರಿನಲ್ಲಿ ಪ್ರಪ್ರಥಮವಾಗಿ ಓದಬೇಕಾದರೆ ಅಲ್ಲಿ ಪ್ರೈಮರಿ ಶಾಲೆಗಳೇ ಇರಲಿಲ್ಲ. ಆ ಊರಿನಲ್ಲಿ ಒಬ್ಬರು ಆರಾಧ್ಯರು ಎಂಬ ಒಬ್ಬ ಉಪಾಧ್ಯಾಯರಿದ್ದರು. ಅವರು ವಿದ್ಯಾವಂತರಾಗಿದ್ದರು. ಅವರು ನಮಗೆ ಪಾಠ ಹೇಳಿಕೊಡುವ ರೀತಿ ಹೇಗೆಂದರೆ, ಮರಳಿನಲ್ಲಿ ಅಕ್ಷರಗಳನ್ನು ನಮ್ಮ ಕೈಲಿ ತಿದ್ದಿಸಿ ಬರೆಸುತ್ತಾ ಇದ್ದರು. ದನದ ಕೊಟ್ಟಿಗೆಗಳಲ್ಲಿ ಪಾಠ ಹೇಳಲು ಕಲಿತುಕೊಳ್ಳುತ್ತಿದ್ದರು. ಅಲ್ಲಿ ನಮ್ಮ ತಂದೆಯ ಕಾಲಕ್ಕೆ ಒಂದು ಪಾಠಶಾಲೆ ಕಟ್ಟಡ ಮಾಡಲು ದುಡ್ಡು ಸಾಕಷ್ಟು ಇರಲಿಲ್ಲ. ಆಗ ನಮ್ಮ ಚಿಕ್ಕಪ್ಪನವರ ಕಾಲದಲ್ಲಿ ಅಲ್ಲಿ ಒಂದು ದೊಡ್ಡ ಸ್ಕೂಲು ಆಯಿತು.

ಈಗ ವಿಚಾರ ಎಷ್ಟು ದೊಡ್ಡದಾಗಿ ಬೆಳೆದಿದೆ, ಎಷ್ಟು ದೂರ ಹೋಗಿದೆ ಎಂದರೆ ಸರ್ಕಾರ ಈ ದಿವಸ ಸರ್ವವ್ಯಾಪಿಯಾಗಿದೆ. ಮಾನವನ ಚಟುವಟಿಕೆಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ಈಗ ಸರ್ಕಾರ ಕೆಲಸ ಮಾಡಬೇಕಾಗಿದೆ. ಇಷ್ಟೊಂದು ವಿಶಾಲವಾಗಿ ಇದರ ಕಾರ್ಯಚಟುವಟಿಕೆಗಳು ನಡೆಯುತ್ತಿರುವಾಗ ಇದರ ಜಟಿಲತೆ ಎಷ್ಟಿದೆ ಎಂಬುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕು. ಇಷ್ಟು ದೊಡ್ಡ ಪ್ರಮಾಣದ ಕಾರ್ಯ ಅದರಲ್ಲೂ ಜಟಿಲತೆಯ ಕೆಲಸಕಾರ್ಯಗಳು ನಡೆಯುತ್ತಿರುವ ಕಡೆ ಅಲ್ಲಿ ಇಲ್ಲಿ ಅಲ್ಪಸ್ವಲ್ಪ ಲೋಪದೋಷಗಳಿರಬಹುದು. ಇಲ್ಲ ಎಂದು ನಾನು ಹೇಳುವುದಕ್ಕೆ ಹೊರಟಿಲ್ಲ. ಹಿಂದೆ ಒಂದಾನೊಂದು ಕಾಲದಲ್ಲಿ ಸರ್ಕಾರಿ ನೌಕರನು ಏನಾದರು ಸ್ವಲ್ಪ ಹೆಚ್ಚು ಕಡಿಮೆಯಾಗಿ ನಡೆದರೆ ಅವನನ್ನು ತಕ್ಷಣವೇ ಅಲ್ಲೇ ಶಿಕ್ಷೆಮಾಡುವುದಕ್ಕೆ ಅವಕಾಶ ಇತ್ತು. ಆದರೆ ಈ ದಿವಸ ಒಂದು ಸಣ್ಣ ತಪ್ಪಿಗೂ ದೊಡ್ಡ ಪ್ರಮಾಣದಲ್ಲಿ ಕಾನೂನನ್ನು ಅನುಸರಿಸಿ ಕೆಲಸಮಾಡಬೇಕಾಗಿದೆ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದರೆ ಅವನು ಮತ್ತೆ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟುಗಳಿಗೆ ಹೋಗುತ್ತಾನೆ. ಅಂಥ ಅವಕಾಶವಿದೆ. ಈಗ ಇನ್ನು ಜನರೆಲ್ಲಾ ಒಗ್ಗಟ್ಟಾಗಿ ಕಾನೂನುಗಳನ್ನೇ ಭಂಗ ಮಾಡುವುದಕ್ಕೆ ಹೊರಟಿದ್ದಾರೆ. ತಾವು ಮಾಡತಕ್ಕ ಕೆಲಸ ಅದು ಸರಿಯಿರಲಿ ಇಲ್ಲದಿರಲಿ ಮಾಡಬೇಕೆಂದು ನಾಲ್ಕು ಜನ ಮನಸ್ಸು ಮಾಡಿದರೆ ಸಾಕು. ಹೀಗೆ ಮೊದಲಿಗೂ ಈಗಲೂ ಕಾಲ ಬಹಳವಾಗಿ ಬದಲಾವಣೆಯಾಗಿದೆ. ಹೀಗಿರುವಾಗ ಕೆಲವು ಮಾನ್ಯ ಸದಸ್ಯರುಗಳು ಯಾವುದೋ ಕಾಲದ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು — ಕಳೆದ ೨೫ ವರ್ಷಗಳ ಹಿಂದಿದ್ದ ಮನೋಭಾವ ಈಗಿಲ್ಲ ಅವರು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಟೀಕೆ ಮಾಡುವುದು ಸರಿಯಲ್ಲ ಎಂದು ನನ್ನ ಪ್ರಾರ್ಥನೆ. ಆದರೆ ಇಂಥ ಒಂದು ಶಾಸನ ಸಭೆಯಲ್ಲಿ ಮಾತನಾಡುವಾಗ ಮಾತುಗಳಲ್ಲಿ ಬಿಗಿ ಇರಬೇಕು—ತೂಕ ಇರಬೇಕು. ಆ ರೀತಿಯಲ್ಲಿ ಮಾತನಾಡುವುದು ಈ ಸಭೆಯ ಭೂಷಣಕ್ಕೆ ಅನುಗುಣವಾದದ್ದು. ಆದರೆ ಇಲ್ಲಿ ನಡೆಯುತ್ತಿರುವುದೇನು ಕೆಲವು ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಾರೆ ಎಂದು ಕೆಲವರು ಆಪಾದನೆ ಮಾಡಿದ್ದಾರೆ. ಇನ್ನು ಕೆಲವರು ಜನಗಳನ್ನು ಪೋಲೀಸ್

(ಶ್ರೀ ಡಿ. ದೇವರಾಜ ಅರಸ್)

ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದರು ಎಂದೂ, ಇನ್ನು ಕೆಲವರು ಫಿರ್ಯಾದನ್ನು ಕೊಡುವುದಕ್ಕಾಗಿ ಸ್ಟೇಷನ್ನಿಗೆ ಹೋಗಿದ್ದವರನ್ನು ಅಲ್ಲೇ ಹಿಡಿದುಹಾಕಿದರು ಎಂದೂ, ಇನ್ನು ಕೆಲವರು ಗೇಣೀದಾರರಿಗೆ ಭೂಮಾಲೀಕರಿಗೆಲ್ಲಾ ಸೇರಿ ತೊಂದರೆ ಕೊಟ್ಟರು ಎಂದೂ, ಹೀಗೆಲ್ಲಾ ಹೇಳಿದ್ದಾರೆ. ನಾನು ಒಂದಾವರ್ತಿ ಪ್ರಯಾಣ ಮಾಡುತ್ತಿದ್ದಾಗ ಕೋಣಂದೂರಿನ ಮೇಲೆ ಹಾದು ಹೋಗಬೇಕಾಗಿ ಬಂತು. ಆ ಸಂದರ್ಭದಲ್ಲಿ ಆ ಗ್ರಾಮಕ್ಕೆ ಹೋಗೋಣ ಎಂದು ಪ್ರಯತ್ನ ಮಾಡಿದೆ. ಆದರೆ ಮಾನ್ಯ ಲಿಂಗಪ್ಪನವರು ಬೆಂಗಳೂರಿಗೆ ಬಂದಿದ್ದಾರೆಂದು ತಿಳಿದುದರಿಂದ ನಾನು ಆ ಗ್ರಾಮಕ್ಕೆ ಹೋಗಲಿಲ್ಲ. ಆದರೂ ಅದೊಂದು ಮಲೆನಾಡಿನ ಗ್ರಾಮಗಳಲ್ಲಿ ದೊಡ್ಡ ಗ್ರಾಮ. ಆದರೆ ಆ ಕೋಣಂದೂರಿನಲ್ಲಿ ಎಲ್ಲರೂ ಈ ಲಿಂಗಪ್ಪನವರ ಹಾಗೇ ಇದ್ದಾರೆಯೇ ಎಂದರೆ—ಇಲ್ಲ. ಅಲ್ಲಿ ಭೂಮಾಲೀಕರಿದ್ದಾರೆ—ಗೇಣಿದಾರರಿದ್ದಾರೆ; ಕೂಲಿಗಾರರಿದ್ದಾರೆ, ಶ್ರೀಮಂತರಿದ್ದಾರೆ, ಪ್ರಾಮಾಣಿಕರಿದ್ದಾರೆ; ಅಪ್ರಾಮಾಣಿಕರೂ ಇದ್ದಾರೆ; ಕಳ್ಳರು ಇದ್ದಾರೆ; ಸುಳ್ಳರು ಇದ್ದಾರೆ; ಅಷ್ಟೇ ಅಲ್ಲ ಅಲ್ಲಿ ಪ್ರಾಮಾಣಿಕರೂ ಧರ್ಮಿಷ್ಠರೂ ಇದ್ದಾರೆ. ಹಾಗೇ ಅಲ್ಲಿ ಎಲ್ಲರೂ ಇದ್ದಾರೆ. ಅಂದಾಗ ನಾನು ಆ ಊರಲ್ಲಿರತಕ್ಕವರೆಲ್ಲರೂ ಮೋಸಗಾರರು ಎಂದು ಹೇಳಿದರೆ ಅದು ಸರಿಯೇ ? ಅಥವಾ ಕೋಣಂದೂರು ಲಿಂಗಪ್ಪನವರು ಇಲ್ಲಿ ಕೂಗಾಡುತ್ತಿರುವಂತೆ ಆ ಗ್ರಾಮದಲ್ಲಿರತಕ್ಕವರೆಲ್ಲಾ ಕೂಗಾಡತಕ್ಕವರೇ ಇದ್ದಾರೆ ಎಂದರೆ ಅದೂ ಕೂಡ ಸರಿಯಲ್ಲ. ಲಕ್ಷೋಪಲಕ್ಷ ಕಾರ್ಯಗಳು ನಡೆಯುತ್ತಿರುವ ಕಡೆ ಅಲ್ಲಿ ಇಲ್ಲಿ ಒಂದು ತಪ್ಪಾಗಿದ್ದರೆ ಅದನ್ನೇ ಒಂದು ದೊಡ್ಡದಾಗಿ ಮಾಡಿ ಉತ್ಪ್ರೇಕ್ಷೆಯಿಂದ ವರ್ಣನೆ ಮಾಡುವುದು ಮಾನವ ಸ್ವಭಾವ. ಆದರೆ ಪಾರ್ಲಿಯಮೆಂಟರಿ ವ್ಯವಹಾರಗಳು ಇಲ್ಲಿ ನಡೆಯುತ್ತಿರುವುದರಿಂದ ಇಲ್ಲಿ ನಾವೆಲ್ಲರೂ ತೂಕವಾಗಿ ಮಾತನಾಡಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಎಲ್ಲಾ ಗೊತ್ತಿದ್ದೇ ನಾವು ಹೇಳಿರುವುದು.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಎಲ್ಲವೂ ಗೊತ್ತಿದ್ದರೆ ಲಂಚ ಕೊಡತಕ್ಕವನನ್ನು ಮತ್ತು ತೆಗೆದುಕೊಳ್ಳುತ್ತಿದ್ದವನನ್ನು ಏಕೆ ಹಿಡಿಯಲಿಲ್ಲ ? ಇದೇ ಸರ್ಕಾರಿ ನೌಕರರು ಎಲ್ಲಾ ಒಟ್ಟು ಸೇರಿದರೆ ಐದು ಲಕ್ಷಕ್ಕೆ ಮೇಲಾಗುವುದಿಲ್ಲ. ಆದರೆ ಲಂಚಕೊಡತಕ್ಕ ಜನರ ಸಂಖ್ಯೆಯೋ ? ಅದು ೩೦ ಲಕ್ಷವಾಗಬಹುದು ಇನ್ನೂ ಹೆಚ್ಚಾದರೂ ಆಗಬಹುದು. ಹಾಗೇ ಲಂಚ ಕೊಡತಕ್ಕವರಲ್ಲಿ ಹುಡುಕಿಕೊಂಡು ಹೋದರೆ ಟೀಕೆ ಮಾಡತಕ್ಕವರೂ ಇದರಲ್ಲಿ ಸೇರಬಹುದು—ಅಂದರೆ ಟೀಕೆ ಮಾಡತಕ್ಕವರ ಚಿಕ್ಕಪ್ಪ ಸೇರಿರಬಹುದು ಇಲ್ಲವೇ ನಮ್ಮ ದೊಡ್ಡಪ್ಪನೂ ಸೇರಿರಬಹುದು. ಹೀಗೆ ಲಂಚಕೊಡತಕ್ಕ ೩೦ ಲಕ್ಷ ಜನರು ಏಕೆ ಸುಮ್ಮನಿದ್ದಾರೆ ? ಪ್ರತಿ ದಿನವೂ ಲಾಯರುಗಳು ಕೋರ್ಟಿನ ಆಫೀಸಿನಲ್ಲಿ ಗುಮಾಸ್ತರಿಗೆ ೫-೧೦ ರೂಪಾಯಿಗಳ ಲಂಚವನ್ನು ಕಕ್ಷಿದಾರರಿಂದ ಕೊಡಿಸಿ ಅವರೇ ಸಾಯಂಕಾಲ ಕ್ಲಬ್ಬುಗಳಲ್ಲಿ ಲಂಚದ ಮೇಲೆ ಭಾಷಣಗಳನ್ನು ಮಾಡಿ ಮತ್ತೆ ಬೆಳಗಾದ ಕೂಡಲೆ ಲಂಚ ಕೊಡಿಸುತ್ತಿದ್ದಾರೆ. ಆದರೆ ಏನೋ ರಂಗಭೂಮಿಯ ಮೇಲೆ ತಮಾಷೆ ಮಾಡಿ ಜನರಿಂದ ಚಪ್ಪಾಳೆಯನ್ನು ತಟ್ಟಿಸಿಕೊಂಡರೆ ಅವನ ವ್ಯವಹಾರ ಅಷ್ಟಕ್ಕೆ ಮುಗಿಯಲಿಲ್ಲ. ಅದರಂತೆ ಎಲ್ಲ ಕಾಲದಲ್ಲೂ ಎಲ್ಲ ವ್ಯವಹಾರದಲ್ಲೂ ಜನರಿಂದ ಚಪ್ಪಾಳೆ ತಟ್ಟಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಇಂಥ ರಾಜ್ಯಭಾರ ವಿಚಾರಗಳಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಪ್ರಮಾಣವರಿತು ಮಾತನಾಡುವುದು ಸರಿಯೆಂಬುದಾಗಿ ನನ್ನ ಒಂದು ವಿನಂತಿ. ನನ್ನ ಈ ಒಂದು ಸರ್ವೀಸಿನಲ್ಲಿ ಲಂಚವಿಲ್ಲದ ಕಾಲವನ್ನೇ ಕೇಳಿಲ್ಲ ನಾನು ಅದರ ಬಗ್ಗೆ ಕುಲ ಹುಡುಕುವುದಕ್ಕೆ ಹೋದರೆ ಕುಳವಾಡಿ ಚಿಕ್ಕಪ್ಪನಾದ ಎನ್ನುವಂತೆ ಈ ಲಂಚದ ವಿಷಯವನ್ನು ಮಾತನಾಡತಕ್ಕ ಕಾಲದಲ್ಲಿ ಆದರಿಂದ ನಾವು ಮಾತನಾಡುವುದರ ಪರಿಣಾಮ ಎಷ್ಟು ದೂರ ಹೋಗುತ್ತದೆ, ಆದರಿಂದ ಅಧಿಕಾರಿಗಳ ಮೇಲೆ ಏನೊಂದು ಪರಿಣಾಮವನ್ನು ಉಂಟುಮಾಡುತ್ತದೆ ಒಳ್ಳೆ ಕೆಲಸ ಮಾಡುತಕ್ಕವರ ಮನಸ್ಸೇನಾಗುತ್ತದೆ ಅವರ ಗೌರವಕ್ಕೆ ಎಷ್ಟು ಭಂಗತರುತ್ತದೆ ಎಂಬುದನ್ನೆಲ್ಲಾ ನಾವು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡುವುದು ಆವಶ್ಯಕ. ಲಂಚಕೊಡತಕ್ಕವರನ್ನು ಹಿಡಿದುಕೊಡುವ ಧೈರ್ಯವನ್ನು ಯಾರೂ ಮಾಡುವುದಿಲ್ಲ, ಏಕೆ ? ಲಂಚವನ್ನು ತಡೆಗಟ್ಟಬೇಕಾದರೆ ಅದರ ಹಾವಳಿಯನ್ನು ತಗ್ಗಿಸಬೇಕಾಗಿದ್ದರೆ ಇಲ್ಲಿ ಭಾಷಣ ಮಾಡಿದರೆ ಅದು ತಗ್ಗುವುದಿಲ್ಲ. ಅಲ್ಲಿ ಯಾರು ಲಂಚಕೊಡುತ್ತಾರೆ ಅವರನ್ನು ಹಿಡಿದುಕೊಟ್ಟರೆ ಅಲ್ಪಸ್ವಲ್ಪವಾದರೂ ಅದು ತಪ್ಪಬಹುದು. ಆದರೆ ಲಂಚ ತೆಗೆದುಕೊಡವರನ್ನು ಶಿಕ್ಷೆಮಾಡೋಣ ಎಂದರೆ ಅವನನ್ನು ಬಿಡಿಸಿಕೊಳ್ಳುವುದಕ್ಕೆ ಬರತಕ್ಕ ಸದಸ್ಯರು ಬಹಳವಾಗಿದ್ದಾರೆ. ಇದಕ್ಕೇನು ಹೇಳಬೇಕು ? ...

ಶ್ರೀ ಕೋಣಂದೂರು ಲಿಂಗಪ್ಪನವರು.—ಸ್ವಾಮಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ಅವರಿಗೆ ಅಂಥ ಒಂದು ಕಾಗದ ಬಂದಿದ್ದರೆ ಅವರೇಕೆ ಇಷ್ಟು ದಿವಸಗಳವರೆಗೂ ಸುಮ್ಮನೆ ಕುಳಿತಿದ್ದರು ? ಅವರು ನನಗೆ ತಕ್ಷಣ ಬರೆದಿದ್ದರೆ ಇದುವರೆಗೆ ನಾನು ಅದರ ವಿಚಾರಣೆ ಮಾಡಿಸಿ ವಿಷಯವನ್ನು ಸಭೆಯ ಮುಂದೆ ಇಡುತ್ತಿದ್ದೆ. ಅವರು ಹಾಗೆ ಮಾಡದೆ ಅದನ್ನು ಈ ಅಸೆಂಬ್ಲಿಯಲ್ಲೇ ತಂದು ಹೇಳಬೇಕಾಗಿತ್ತೇ ? ಅವರು ನನಗೆ ಈ ವಿಚಾರವನ್ನು ತಿಳಿಸುತಿ ರುವುದು ಇದೇ ಪ್ರಥಮತಃ. ಆದರೆ ಇಲ್ಲಿ ಆಡಳಿತವನ್ನು ಅಂದರೆ ಪೋಲೀಸ್ ಇಲಾಖೆಯಲ್ಲ ಜಿ.ಎ.ಡಿ. ಅಥವಾ ಇನ್ನಾವ ಇಲಾಖೆಯೇ ಆಗಲಿ ರಾಜ್ಯದ ಆಡಳಿತವನ್ನು ನಾವು ನೀವೂ ಉಭಯತ್ರರೂ ಸೇರಿ ನಡೆಸುತ್ತಿದ್ದೇವೆ ಇದಕ್ಕೆ ಮುಖ್ಯಮಂತ್ರಿಯೊಬ್ಬನೇ ಕಾರಣನಲ್ಲ. ಇಲ್ಲಿ ನಮ್ಮದೊಂದು ಪಾತ್ರ—ನಿಮ್ಮದೊಂದು ಪಾತ್ರ. ಆದರೆ ಗುರಿ ಇಬ್ಬರದು ಒಂದೇ. ಅಂದಾಗ ಇಲ್ಲಿ ನಾವು ಮಾತನಾಡುವಾಗ ಒಬ್ಬ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಿದ್ದಾನೆಂದು ಹೇಳಿದರೆ ಇಲ್ಲಿ ಒಂದು ಅಪಾದನೆ ಮಾಡಿದರೆ ಅದರಿಂದ ಅವನಲ್ಲಿ ಒಂದು ಸತ್ಪರಿಣಾಮವುಂಟಾಗುತ್ತದೆಯೋ ಅಥವಾ ದುಷ್ಪರಿಣಾಮ ಉಂಟಾಗುತ್ತದೆಯೆ ಎಂಬುದನ್ನು ಆಲೋಚನೆ ಮಾಡಬೇಕು. ಸುಬ್ಬಯ್ಯಶೆಟ್ಟರು ಮತ್ತಿತರರು ಅಡ್ಮಿನಿಸ್ಟ್ರೇಟಿವ್ ಬ್ಯೂರೊಕ್ರಸಿ ಎಂದು ಹೇಳಿದರು. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಸರಕಾರದ ಮೇಲೆ ಹೀಗೆ ಟೀಕೆಮಾಡುತ್ತಿದ್ದರು, ಮಾಡದೆ ಇರುವವರೇ ಇರಲಿಲ್ಲ, ಅದಕ್ಕೆ ಹೆಚ್ಚು ಪುಸ್ತಕ ಓದಬೇಕಾಗಿರಲಿಲ್ಲ. ಅಧಿಕಾರಿಗಳನ್ನು, ಸರಕಾರವನ್ನು ಟೀಕೆ ಮಾಡುತ್ತಿದ್ದರು, ಬಯ್ಯುತ್ತಿದ್ದರು. ಸ್ವಾತಂತ್ರ್ಯ ಬಂದು 28 ವರ್ಷವಾಯಿತು. ಈಗಲೂ ಕೂಡ ಬ್ಯೂರಾಕ್ರಸಿ ಎಂದರೆ ಹೇಗೆ ? ರಷ್ಯ ಮತ್ತು ಸೈನಾಗಳಲ್ಲಿರುವುದನ್ನು ಅಡಾಪ್ಟ್ ಮಾಡೋಣ ಅಂದರೆ ಹಾಗೆ ಮಾಡಿದರೆ ಸ್ಟ್ರೈಕ್ ಮಾಡುವುದಕ್ಕೆ ಅವಕಾಶವಿಲ್ಲ. ಕೃಷ್ಣನ್‌ರವರು ಸ್ಟ್ರೈಕ್ ಮಾಡಿಸುವುದಕ್ಕೆ ವಿಧಾನಸೌಧ ಛಲೋ ಎಂದು ಹೇಳುವುದಕ್ಕೆ ಆಗ ಅವಕಾಶವೇ ಇರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕುಂದುಕೊರತೆಗಳ ನಿವಾರಣೆಯಾದರೆ ಏಕೆ ಸ್ಟ್ರೈಕ್ ಮಾಡುವರು ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಸ್ಟ್ರಕ್ಚರ್‌ಗೆ ಅನುಗುಣವಾಗಿದ್ದರೆ ಪರವಾಗಿಲ್ಲ. ಯಾವ ರೀತಿ ಮಾಡಬೇಕೋ ಗೊತ್ತಿಲ್ಲ ಬದಲಾವಣೆ ಹೇಗೆ ಮಾಡೋಣ ? ಕಾನ್‌ಸ್ಟಿಟ್ಯೂಷನ್ ವಿಚಾರ ಮಾತನಾಡುತ್ತೀರಿ. ಅದರಲ್ಲಿರುವುದನ್ನೆಲ್ಲಾ ಈಗ ಬದಲಾಯಿಸಬೇಕೇ ? ಅದು ಸಾಧ್ಯವೇ ? ಅಮೇರಿಕನ್ ಸಿಸ್ಟಂ ಪ್ರಕಾರ ಯಾರು ಅಧಿಕಾರಕ್ಕೆ ಬರುವರೋ ಅವರು ತಮಗೆ ಬೇಕಾದ ಜನರನ್ನು ತಂದು ಅವರು ಬಿಟ್ಟುಹೋಗುವಾಗ ಬಿಟ್ಟುಹೋಗಬಹುದು. ಆ ಸಿಸ್ಟಂ ಕಾನ್‌ಸ್ಟಿಟ್ಯೂಷನ್ ಪ್ರಕಾರ ಆಡಾಪ್ಟ್ ಮಾಡುವುದಕ್ಕಾಗುತ್ತದೆಯೇ ? ಅದಕ್ಕೆ ಕಾನ್‌ಸ್ಟಿಟ್ಯೂಯಂಟ್ ಅಸೆಂಬ್ಲಿಯಾಗಬೇಕು. ಪ್ರತಿಯೊಂದು ತಾಲ್ಲೂಕಿಗೂ ಅಲ್ಲಿನ ಎಂ.ಎಲ್.ಎ. ದಳಪತಿಯಾಗಬೇಕು, ಪೋಲೀಸರು ಅವರು ಹೇಳಿದಹಾಗೆ ಕೇಳಬೇಕು. ಮುನ್ಸೀಫರು ಅವರು ಹೇಳಿದಹಾಗೆ ಜಡ್ಜ್‌ಮೆಂಟ್ ಬರೆಯಬೇಕು ಎಂದು ಹೇಳಬಹುದು.

ಶ್ರೀ ಎಂ ಎಸ್. ಕೃಷ್ಣನ್.—ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳು ಹೀಗೆ ಹೇಳಿದರು. Railway Board is so powerful that even the minister is not able to do anything. So, bureacracy has taken such a power position in our set up. ಅವರು ಈ ದಿವಸ ಹೀಗೆ ಹೇಳುತ್ತಾರೆ. ಯಾವುದನ್ನು ನಂಬಬೇಕು ?

SRI D. DEVARAJA URS.—Whether a Minister in the Centre or State makes such a statement, I beg to differ from such Minister's view ; because all such talks lads to some other talk. If bureaucracy comes in the way of progress they should think of making some better Changes. Even now I say and aver under the present system.

ಈಗಿನ ಸಿಸ್ಟಂನಲ್ಲಿ ಬ್ಯೂರಾಕ್ರಸಿ ಇಲ್ಲದೆ ಇರುವುದಕ್ಕೆ ಸಾಧ್ಯವಿಲ್ಲ ನಂಬೂದ್ರಿಪಾದ್‌ರವರು ಬಂದು ಎಲ್ಲಾ ಬದಲಾಯಿಸಿದರೇ ? ಉತ್ತರ ಕೊಡಿ. ಕಮ್ಯೂನಿಸ್ಟ್ ಪಕ್ಷದವರು ಮಂತ್ರಿಯಾದವರು ಬಂದರು. ಅವರು ಎಲ್ಲವನ್ನೂ ಬದಲಾಯಿಸಿದರೇ ? ಎಲ್ಲವನ್ನೂ ಇಲ್ಲಿ ಬದಲಾಯಿಸುವುದಕ್ಕೆ ಸಾಧ್ಯವೇ ? ಒಂದು ಕಾನ್‌ಸ್ಟಿಟ್ಯೂಷನ್ ಏನಿದೆ ಅದರ ಪ್ರಕಾರ ಹೋಗಬೇಕು. ಸುಮ್ಮನೆ ಕಥೆ ಹೇಳಿದರೆ ಪ್ರಯೋಜನವಿಲ್ಲ. ರಾಜ್ಯದಲ್ಲಿರುವವರು, ಶಾಸನ ಸಭೆಯಲ್ಲಿರುವವರು ಅಥವ ಬೇರೆ ಕಡೆ ಇರುವವರು ಸರಕಾರಿ ಅಧಿಕಾರಿಗಳನ್ನು ಬಯ್ಯುವುದು ಸುಲಭ. ಬಯ್ದುಕೊಂಡು ಹೋಗಬಹುದು ; ಕೇಳುವವರಿಲ್ಲ. ಆದರೆ ಅದು ಸರಿಯಾದ ಮಾರ್ಗವಲ್ಲ. ಬ್ಯೂರಾಕ್ರಸಿ ಅಂದರೆ ಮನೆಯಲ್ಲಿ ಹೆಂಡತಿ ಗಂಡನ ಬಗ್ಗೆ ಸಿಡಿಮಿಡಿ ಮಾಡಿ ಬಯ್ದುಹಾಗಾಗುತ್ತದೆ. ಗಂಡ ಹೆಂಡತಿ ಜೊತೆಯಲ್ಲಿ ಸಂಸಾರ ಮಾಡಲೇಬೇಕು.

SRI M. S. KRISHNAN.—I can understand you telling that officer are necessary. But, I cannot understand your view that bureacracy is a necessity.

SRI D. DEVARAJ URS.—That is not the dictionary meaning of the bureacracy. That is the concept you will have in your mind. You can shape it according to your linking. However, as a member o the Hous , everybody has to do something ; either directly or indirectly. If anything in the presen: set up is wrong you tell the Goveonment or write to the Government stating that this is the wrong. Some people say about the committed bureacracy. But I want to ask—"are we committed first" ? ಕುದುರೆ ಸವಾರಿ ಯಾವರೀತಿ ಮಾಡಬೇಕು ಎಂದು ಒಂದು ಪದ್ಧತಿ ಇದೆ. ಸುಮ್ಮನೆ ಬಯ್ದರೆ ಏನು ಪ್ರಯೋಜನ ? ಈ ದಿವಸ ಕಾಂಸ್ಟಿಕೇಟೆಡ್ ಸಿಸ್ಟಂನಲ್ಲಿ ವ್ಯವಹಾರವನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ನನಗಿರುವಂತೆ ಸದಸ್ಯರಿಗೂ ಸಹ ಜವಾಬ್ದಾರಿಯಿದೆ. I confess that none are committed. All are not committed. As individuals of party, are we committed ?

ಎಲ್ಲಾ ಬಯ್ಯುತ್ತಿದ್ದರೆ, ಎಲ್ಲಾ ಕೆಟ್ಟದ್ದು ಅಂದರೆ ಪ್ರಯೋಜನವಿಲ್ಲ. ಕಮಿಟೆಡ್ ಬ್ಯುರಾಕ್ರೆಸಿ ಇರಬೇಕೇ, ಕಮಿಟೆಡ್ ಅಲ್ಲದಿರುವ ಬ್ಯುರಾಕ್ರೆಸಿ ಇರಬೇಕೇ ಎಂದು ದೇಶದಲ್ಲಿ ಚರ್ಚೆಯಾಯಿತು. Nobody has committed to this. As individuals of party are we committed ? ಪಾರ್ಟಿ ಸಿಸ್ಟಂನಲ್ಲಿ ಕಮಿಟೆಡ್ ಇಲ್ಲ.

What does the article 309 of the constitution say ? ಕೆಲವುದರಲ್ಲಿ ಕಮಿಟೆಡ್ ಇರುತ್ತದೆ. ಲ್ಯಾಂಡ್ ರೆವೆನ್ಯೂ ರಿಫಾರಮ್ಸ್ ಬಿಲ್ಲು ಬಂದಾಗ ಕೈ ಎತ್ತಿ ಊರಿಗೆ ಹೋದಾಗ ತಮ್ಮ ಜಮೀನನ್ನು ಕಿತ್ತುಕೊಳ್ಳುವುದಕ್ಕೆ ಬಂದರೆ ಅದಕ್ಕೆ ವಿರುದ್ಧವಾಗಿ ಕಿತ್ತುಕೊಳ್ಳುವ ಪ್ರಸಂಗಗಳಂಥವು ಅನೇಕವಿರಬಹುದು. ಕಮಿಟೆಡ್ ಆಫೀಸರ್ಸ್ ಯಾವ ಪಕ್ಷ ಅಧಿಕಾರಕ್ಕೆ ಬಂದರೆ ಅದರ ನೀತಿಯನ್ನು ಇಂಪ್ಲಿಮೆಂಟ್ ಮಾಡುವರು.

ಸರ್ವೀಸಸ್ ಕಾನ್‌ಸ್ಟಿಟ್ಯೂಷನ್ ಪ್ರಕಾರ, ಆರ್ಟಿಕಲ್ ೩೦೯ರಲ್ಲಿರುವುದನ್ನು ಗಮನಿಸಿದರೆ ಅದರ ಪ್ರಕಾರ ಆಕ್ಟ್ ಮಾಡಬಹುದಾಗಿತ್ತು. ಅದನ್ನು ಮಾಡಬೇಕೆಂದಿದೆ. ಆದನ್ನು ಸುಬ್ಬಯ್ಯ ಶೆಟ್ಟರು ಹೇಳಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ರೀತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಬರುತ್ತೇನೆ. ಆರ್ಟಿಕಲ್ ೩೦೯ರ ಪ್ರಕಾರ ಸರ್ವೀಸಸ್ ವಿಚಾರದಲ್ಲಿ ಲೆಜಿಸ್ಲೇಚರ್‌ನಿಂದ ಒಂದು ಎನ್ಯಾಕ್ಟ್‌ಮೆಂಟ್ ಆಗಬೇಕು. ಇದನ್ನು ೨೫ ವರ್ಷಗಳಿಂದ ಯಾರೂ ಕೇಳಿಲ್ಲ. I do not know what is the position in the Centre. Is there any enactments there ? No ಸೆಂಟರ್‌ನಲ್ಲಿ ಸಹ ಇಲ್ಲವಂತೆ. ಯಾವ ಸ್ಟೇಟ್‌ನಲ್ಲೂ ಸಹ ಇಲ್ಲ. ಇದು ಹಾಗೆಯೇ ನಡೆಯುತ್ತಿದೆ. I think all other States including Centre should be guided by enlightened people like Sri Puttaswamy.

SRI SUBBAYYA SHETTY.—Subject to correction—I think in Kerala they have enacted one.

SRI D DEVARAJ URS.—That is a matter which has been examined once or twice. Even previously before my coming here, that question has been examined and kept back. May be for good reasons. But, in practice, it has been found to be quite alright and convenient not for me ; but for the Government as a whole, to continue the practice as has been continued hitherto. ಎಷ್ಟೋ ಪ್ರಾವಿಷನ್ಸ್ ಇವೆ. ಪ್ರಾಕ್ಟಿಕಲ್ಲಾಗಿ ಒಂದು ರೀತಿ ಮಾಡಿಕೊಂಡು ಹೋಗುತ್ತಿದ್ದಾರೆ. ಯಾರೂ ಇದನ್ನು ಹೇಳಿಲ್ಲ. ಎಲ್ಲಾ ಒಪ್ಪಿಕೊಂಡು ನಡೆದುಕೊಂಡು ಹೋಗುತ್ತಿದ್ದಾರೆ ಅಷ್ಟೆ.

ಶ್ರೀ ಎಂ.ಎಸ್. ಕೃಷ್ಣನ್.—ಕೇರಳ ಸರ್ಕಾರದವರು ಮಾಡಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಕೇರಳದಲ್ಲಿ ಏನು ಮಾಡಿದ್ದಾರೆನ್ನುವುದನ್ನು ನೋಡೋಣ. ಕೇರಳದವರು ಮಾಡಿರಬಹುದು. ಅವರು ಆದಾಯದಲ್ಲಿ ೬೦ ಪರ್ಸೆಂಟ್ ಬರೀ ಸಂಬಳಕ್ಕೇ ಖರ್ಚು ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿದ ವಿಚಾರವನ್ನು ಮೊದಲು ಪ್ರಸ್ತಾಪ ಮಾಡುವುದು ಒಳ್ಳೆಯದು. ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರ ಮತ್ತು ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಏನು ಮಾಡಿದ್ದೀವಿ ಅದರ ವಿಚಾರ. ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಬೇಕು ಎಂದು ತೀರ್ಮಾನವಾಗಿ ಅವುಗಳು ಆದದ್ದು ೧೯೭೦ನೇ ಇಸವಿಯ ಆದಿಭಾಗದಲ್ಲಿ. ಆದರೆ ಅವರು ಮಾಡಿದ್ದರಿಂದ ನಾನು ಮಾಡಿದೆ ಎಂದು ಆ ರೀತಿಯಾಗಿ ವಾದ ಮಾಡಲು ಬಂದಿಲ್ಲ. ಆ ರೀತಿ ಕಮಿಟಿಗಳನ್ನು ಮಾಡುವುದರ ಹಿನ್ನಲೆ ಏನು ಎನ್ನುವುದರ ವಿಚಾರವನ್ನು ಮಾನ್ಯ ಸಭೆಯ ಮುಂದೆ ಒಂದೆರಡು ಮಾತಿನಲ್ಲಿ ತಿಳಿಸಬೇಕಾದದ್ದು ನನ್ನ ಧರ್ಮ. ಹಿಂದೆ ಪೇ ಕಮಿಷನ್ ಎಂದು ಮಾಡಿದರು. ಅವರು ಒಂದು ರೆಕಮೆಂಡೇಷನ್ನು ಈ ವಿಚಾರದಲ್ಲಿ ಮಾಡಿದ್ದಾರೆ.

"Recruitment had been suspended for the last few years, for one reason or the other and vacancies that arose frome time to time were filled by appointing local candidates. The steps to be taken for regularising the services of the local candidates are dealt with separately. The point, however, remains that accumulation of vacancies by postponement of recruitment even after sufficient number of vacancies had occurred in any cadre is not conducive to efficiency and should therefore be guarded against. It is, therefore, recommended that the Public Service Commission should be moved in time hereafter to arrange for the recruitment of candidates to posts at higher levels only and suitable rules should be framed delegating powers of recruitment fof posts at lower levels to heads of departments sitting with some otheres of equal status to constitute recruitment committees."

ಇದು ಅವರ ರೆಕಮೆಂಡೇಷನ್. ಸರ್ಕಾರದವರು ಈ ಶಿಫಾರಸನ್ನು ಪ್ರೋಸೆಸ್ ಮಾಡಿದರು. ಇದಕ್ಕೆ ಕಾರಣವೂ ಇದೆ. ಹಿಂದೆ ೧೯೬೩ನೇ ಇಸವಿಯಲ್ಲಿ ಡಿವಿಜನಲ್ ಮತ್ತು ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿಗಳು ಮೂರನೆ ಕ್ಲಾಸ್ ಹುದ್ದೆಗಳಿಗಾಗಿ ಇತ್ತು. ೧೯೬೯ರಲ್ಲಿ ಎಲ್ಲವನ್ನೂ ಮತ್ತೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೊಟ್ಟರು. ೧೯೭೦ರಲ್ಲಿ ಪುನಃ ಹಿಂದಕ್ಕೆ ತಂದರು. ರಿಕ್ರೂಟ್ ಮಾಡುವ ಕೆಲಸ ಕೆಲವು ದಿವಸ ಅಲ್ಲಿ ಕೆಲವು ದಿವಸ ಇಲ್ಲಿ ಆಗಿ ೧೫—೨೦ ಸಹಸ್ರ ಜನರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಳ್ಳುವುದು, ಅವರನ್ನೆಲ್ಲ ಕನ್‌ಫರ್ಮ್ ಮಾಡುವುದು ಈ ರೀತಿಯಾಯಿತು. ೨೦ ಸಾವಿರ ನಾವು ಎಲ್ಲ ಸೇರಿ ಮಾಡಿದ್ದೇವೆಂದು ಹೇಳುತ್ತೇನೆ. ಈ ಕೆಲ ೭ ಸಾವಿರ ಜನರನ್ನೇ ಏನೋ ಕನ್‌ಫರ್ಮ್ ಮಾಡಲಾಗಿದೆ. ಇದೆಲ್ಲ ನಡೆದಿರುವುದು ತಮಗೆಲ್ಲ ಗೊತ್ತು. ಪೇ ಕಮಿಷನ್ನಿನವರು ಇದನ್ನೆಲ್ಲ ನೋಡಿ ತಮ್ಮ ಶಿಫಾರಸನ್ನು ಮಾಡಿದ್ದಾರೆ. ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಂಡಾಗಲೆಲ್ಲ ಎಲ್ಲರನ್ನೂ ಕನ್‌ಫರ್ಮ್ ಮಾಡಿ ಎಂದು ಎಲ್ಲರೂ ಹೇಳುವವರೇ ಹೊರತು ಬೇಡ ಎಂದು ಹೇಳುವವರು ಕೆಲವರು ಇರಬಹುದು. ಅವರು ಯಾರು ಎಂದರೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರು. ಲೋಕಲ್ ಕ್ಯಾಂಡಿಡೇಟ್ಸ್ ವಿಚಾರ ಬಂದು ಅವರನ್ನು ಕನ್‌ಫರ್ಮ್ ಮಾಡಬೇಕು ಎಂದಾಗಲೆಲ್ಲ ಅವರಿಗೆ ಅನ್ಯಾಯವಾಗುತ್ತಿದೆ ಎಂದು ಅವರು ಕೂಗಿದ್ದೂ ಕೂಗಿದ್ದೇ. ನಮ್ಮ ಪಾಡಿಗೆ ನಾವು ಮಾಡಿದ್ದೂ ಮಾಡಿದ್ದೇ. ನಮಗೆ ಇದರಿಂದ ಅನ್ಯಾಯವಾಗುತ್ತದೆ, ನಮಗೆ ಸಿಕ್ಕಬೇಕಾದ ಕೋಟಾ ಬರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಒಂದು ಜಾತಿಯ ಕೆಲವು ಜನರು ಬರುವುದಕ್ಕೆ ಅವಕಾಶವಾಗುತ್ತದೆ, ಒಬ್ಬ ಅಧಿಕಾರಿ ಯಾರಿರುತ್ತಾರೆ ಅವರು ಸಾಮಾನ್ಯವಾಗಿ ಅವರ ಜನಗಳಿಗೇ ಹೆಚ್ಚಾಗಿ ಕೊಡುತ್ತಾರೆ ಎನ್ನುವ ಮಾತನ್ನು ಬಹಿರಂಗವಾಗಿ ಮತ್ತು ಅಂತರಂಗದಲ್ಲಿ ಆಡಿಲ್ಲವೇ ಎನ್ನುವ ಮಾತನ್ನು ಕೇಳುತ್ತೇನೆ. ಹೀಗಿದ್ದ ಮೇಲೆ ಸ್ಥಳೀಯ ಅಭ್ಯರ್ಥಿಗಳ ನೇಮಕವಾಗುವುದನ್ನು ತಪ್ಪಿಸುವುದು ಹೇಗೆ? ರಿಕ್ರೂಟ್‌ಮೆಂಟ್ ಕಮಿಟಿಗಳು ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರವನ್ನೆಲ್ಲ ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದಾರೆ ಕಾನೂನು ಇದೆ ಕಾನ್‌ಸ್ಟಿಟ್ಯೂಷನ್ ಇದೆ ತಾತ್ವಿಕ ಹಿನ್ನಲೆ ಇದೆ, ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿದ್ದೆಲ್ಲ ಇದೆ. ಆದರೊಳಗೆ ಭಿನ್ನಾಭಿಪ್ರಾಯವಿಲ್ಲ.

(ಶ್ರೀ ಡಿ. ದೇವರಾಜ ಅರಸ್)

ವಸ್ತುತಃ ಕಾರ್ಯಕ್ರಮ ಮಾಡತಕ್ಕ ಕಾಲದಲ್ಲಿ ರಿಕ್ರೂಟ್ ಮಾಡಬೇಕಾದರೆ ೧೦ ಪೋಸ್ಟ್ಸ್ ಇದ್ದರೆ ೧೦೦ ಅರ್ಜಿಗಳು ಬರುತ್ತಿದ್ದುವು. ಈಗ ಸಾವಿರಾರು ಅರ್ಜಿಗಳು ಬರುತ್ತವೆ, ಅವುಗಳನ್ನೆಲ್ಲ ನೋಡಬೇಕು, ಸಾರ್ಟ್‌ಔಟ್ ಮಾಡಬೇಕು ಎಲ್ಲ ಕಾಂಪ್ಲಿಕೇಟೆಡ್. ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡುವುದು ರಾಜ್ಯಾಂಗಕ್ಕೆ ವಿರೋಧವಲ್ಲ. ನಾನೂ ಶ್ರೀ ಪುಟ್ಟಸ್ವಾಮಿಯವರೂ ಯಾವ ಒಂದು ಮಂತ್ರಿಮಂಡಲದಲ್ಲಿದ್ದೆವೋ ಆಗಲೇ ತೀರ್ಮಾನ ಮಾಡಿದ್ದೇವೆ Constitutionally it may be correct ಎಂದು ಅವರೂ ಹೇಳುತ್ತಾರೆ. ಪೇ ಕಮಿಷನ್ನಿನವರು ಯಾವ ಸಲಹೆಯನ್ನು ಕೊಟ್ಟರೋ ಆ ಸಲಹೆಯ ಪ್ರಕಾರ ೧೯೭೧ನೇ ಇಸವಿ ಫೆಬ್ರುವರಿ ತಿಂಗಳು ಒಂಬತ್ತನೇ ತಾರೀಖು ಶ್ರೀಮಾನ್ ವೀರೇಂದ್ರ ಪಾಟೀಲರ ಮಂತ್ರಿಮಂಡಲದಲ್ಲಿ ಒಂದು ತೀರ್ಮಾನ ಮಾಡಿದ್ದಾರೆ. ಆ ತೀರ್ಮಾನವೇನು ಎಂದರೆ —

"In addition to the Heads of Departments and two subordinate officers, two non-officials, one of whom belonging to S.C. and S T. should be members of the Selection Committee concerned." ಎಂದು ಆಗ ತೀರ್ಮಾನ ತೆಗೆದುಕೊಂಡರು. ಆದರೆ ಕಮಿಟಿಗಳನ್ನು ರಚನೆ ಮಾಡುವುದಕ್ಕೆ ಆಗಲಿಲ್ಲ. ಸರ್ಕಾರ ಮಾರ್ಚಿ ತಿಂಗಳಿನಲ್ಲಿ ಬದಲಾವಣೆಯಾಯಿತು. ಬದಲಾವಣೆಯಾದ ಮೇಲೆ ಅದೇ ತೀರ್ಮಾನವನ್ನು ಮುಂದುವರಿಸಿ ರಾಜ್ಯಪಾಲರ ಕಾಲದಲ್ಲಿ ಕಮಿಟಿಗಳನ್ನು ರಚನೆ ಮಾಡಿದರು. ಅದರಲ್ಲಿ ಕೆಲವು ಮಾಡಿಫಿಕೇಷನ್ಸ್ ಮಾತ್ರ ಮಾಡಿದರು. ಮಂತ್ರಿಮಂಡಲ ಮಾಡಿದ ತೀರ್ಮಾನದಲ್ಲಿ ನಾನ್ ಅಫಿಷಿಯಲ್ಸ್ ಇರುವುದು ಒಳ್ಳೆಯದು ಎಂದು ಹೇಳಿದ್ದರು. ರಾಜ್ಯಪಾಲರ ಕಾಲದಲ್ಲಿ ಅದು ಬೇಡ ಎಂದು ಅವರಿಗೆ ಬದಲಾಗಿ ರಿಟೈರ್ಡ್ ಅಧಿಕಾರಿಗಳನ್ನು ಹಾಕಿದರು. ೧೯೭೧ನೇ ಇಸವಿ ಫೆಬ್ರುವರಿ ತಿಂಗಳಲ್ಲಿ ತೀರ್ಮಾನವಾಗಿದ್ದು ಮಾರ್ಚಿ ತಿಂಗಳಿನಲ್ಲಿ ರಾಜ್ಯಪಾಲರು ಕಮಿಟಿಗಳನ್ನು ಮಾಡಿದರು. ಇದು ಕಮಿಟಿಗಳನ್ನು ರಚನೆ ಮಾಡುವುದಕ್ಕೆ ಸಂಬಂಧಪಟ್ಟಂತ ಅದರ ಹಿಂದಿನ ವಿವರ.

SRI K. PUTTASWAMY.—The principles underlying the setting up of the Public Service Commission should be made applicable to any Recruitment Committees. Now that the Government has taken a wise decision and has strengthened the P.S.C., I would like to ask the Hon'ble Chief Minister whether the P.S.C. cannot discharge these responsibilities now ?

SRI D. DEVARAJ URS.— That is one view. What was the necessity for taking such a view in the year 1971? I am not at all quarrelling with the decision, it might be a wiser move. I do not say it is a wrong decision. I do not say a wrong decision at a good decision But as long as the decision taken is within the four walls of the Constitution and it has been done legally, we cannot say that it is a wrong decision. They might have done it for administrative convenience. We want recruitment to go on more and more.

ಶ್ರೀ ಕೆ. ಸಿದ್ದಯ್ಯ: ಮಾನ್ಯ ಸಚಿವರು ಹೇಳುವ ರೀತಿಯಲ್ಲಿ ೩೨೦ ನೇ ಆರ್ಟಿಕಲ್ ಪ್ರಕಾರ ಇದರಲ್ಲಿ ಯಾವುದೂ ಬರುವುದಿಲ್ಲ. ಹಾಗೇ ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ರೆಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಆಗಿರುವ ಅನ್ಯಾಯಗಳನ್ನು ಸರಿಮಾಡುತ್ತೀರಾ ?

Sri M. S KRISHNAN.— The question is whether it is legally constituted or not.

Sri D DEVARAJ URS.— In our view we feel that there is necessity and in your view it might not be necessary. Let us continue them because very recently we have confirmed local candi-

dates to the tune of 7000 people, we are not able to complete the process. We are not able to keep up with that recruitment. that is necessary for the Government That is our experience now. This is one aspect. The other aspect is.

Sri K. PUTTASWAMY.—Three years existence of these committees have not improved matters.

Sri D DEVARAJ URS — If these committees could not cope up with it, much less the Public Service Commission can cope up with it. That experience is already before us.

ವ ತ್ತೆ ಕಾಂಪೊಸಿಷನ್‌ನಲ್ಲಿ ನಾನ್ ಅಫಿಷಿಯಲ್ಸ್ ಹಾಕಬೇಕು ಎಂದು ಮಾಡುವಾಗ ಇದರಲ್ಲಿ ಕೆಲವು ವ್ಯತ್ಯಾಸಗಳಾದವು ಎಂದು ಇನ್ನೊಂದು ರೀತಿಯಾದ ಆಕ್ಷೇಪಣೆಯೂ ಇದೆ. ತಾತ್ವಿಕವಾಗಿ. ಕಮಿಟಿ ಮಾಡುವ ಉದ್ದೇಶವೇನು ಹಾಗೂ ಇದರ ಹಿನ್ನೆಲೆ ಏನು ಎನ್ನುವುದನ್ನು ನಾನು ಇಲ್ಲಿ ತಿಳಿಸುತ್ತಿದ್ದೇನೆ. ಇದರಲ್ಲಿ ನಾನ್ ಅಫಿಷಿಯಲ್ಸ್‌ನ್ನು ಹಾಕಬೇಕು ಎಂದು ಹಿಂದೆ ಇದ್ದ ಸರಕಾರದವರೂ ಕೂಡ ತೀರ್ಮಾನ ಮಾಡಿ ಯಾವ ರೀತಿ ಅವರನ್ನು ತೆಗೆದುಕೊಳ್ಳಬೇಕೆಂದು ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಕಮಿಟಿಗಳಲ್ಲಿ ಎಸ್. ಸಿ. ಹಾಗೂ ಎಸ್. ಟಿ ವರ್ಗದವರೂ ಕೂಡ ಇರಲಿ ಎಂದು ಇದ್ದುದನ್ನು ರಾಜ್ಯಪಾಲರು ಬಂದಾಗ ಅದನ್ನು ಬದಲಾವಣೆ ಮಾಡಿ ಇದರಲ್ಲಿ ನಾನ್ ಅಫಿಷಿಯಲ್ಸ್‌ಗೆ ಬದಲಾಗಿ ರಿಟೈರ್ಡ್ ಅಫಿಷಿಯಲ್ಸ್ ಇರಲಿ ಎಂದು ಮಾಡಿದರು. ನಾವು ಅದನ್ನು ಬದಲಾಯಿಸಿ ಇದರಲ್ಲಿ ಬೇರೆ ಬೇರೆ ಅನ್‌ರೆಪ್ರಸೆಂಟ್ ಸೆಕ್ಷನ್‌ನವರೂ ಇರಲಿ ಎಂದು ಮಾಡಿದ್ದೇವು. ಇದರ ಬಗ್ಗೆ ಕೆಲವು ಲೋಪದೋಷಗಳಿವೆ ಎಂದು ತಾವು ಇಲ್ಲಿ ಹೇಳಿ ಇದರ ಬಗೆ ವಿಪರೀತವಾಗಿ ಅಂದು ಬೇಜಾರು ಕೂಡ ಮಾಡಿ ಹೇಳಿದ್ದೀರಿ. ಆ ನಂತರ ನೀವುಗಳು ಹೇಳಿದ ಪ್ರಕಾರ ಅನ್‌ರೆಪ್ರಸೆಂಟೆಡ್ ಸೆಕ್ಷನ್‌ನನ್ನು ಬಿಡುವುದಕ್ಕೆ ಯೋಚನೆಮಾಡಿ ಇಬ್ಬರು ನಾನ್ ಅಫಿಷಿಯಲ್ಸ್ ಎಂದು ಇದ್ದುದರ ಜೊತೆಗೆ ಇನ್ನೊಬ್ಬರು ನಾನ್ ಅಫಿಷಿಯಲ್ಸ್ ಇರಲಿ ಎಂದು ಮಾಡಿದ್ದೇವೆ. ಇದನ್ನು ಮಾಡುವಾಗ ಅನ್‌ರೆಪ್ರಸೆಂಟೆಡ್ ಸೆಕ್ಷನ್‌ನನ್ನೂ ನೋಡಿ ಸಾಧ್ಯವಾದ ಮಟ್ಟಿಗೆ ಇದನ್ನು ಮಾಡಬೇಕೆಂದು ಸ ರ ಕಾ ರ ದ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ .— ತಾವು ಕಮಿಟಿಗಳನ್ನು ಮಾಡುವಾಗ ಅನ್‌ರೆಪ್ರಸೆಂಟೆಡ್ ಬಗ್ಗೆ ಹೇಳಿದ್ದೀರಿ. ಸರಕಾರ ಇದರ ಬಗ್ಗೆ ಯೋಚನೆ ಮಾಡಿ ಮಾಡುವಾಗ ಒಂದೊಂದು ಕಮಿಟಿಯಲ್ಲಿ ನಾಲ್ಕು ಜನರು ಇರಬೇಕು ಎಂದು ಈಗ ತಾವು ಹೇಳಿದ ಪ್ರಕಾರ ಮಾಡಿದ್ದೀರಿ. ಮಾಡಲು ರೂಲ್ಸ್‌ಗಳ ಅಡಚಣೆ ಇದೆ ಎಂದು ಕೇಳುತ್ತೇವೆ. ಹಾಗೆ ಇರುವಾಗ ಅನೇಕ ಸಮಿತಿಗಳಲ್ಲಿ ಅನ್‌ರೆಪ್ರಸೆಂಟೆಡ್ ಸೆಕ್ಷನ್‌ಗಳ ಪ್ರತಿನಿಧಿಗಳಿಗೆ ರೆಪ್ರಸೆಂಟೇಷನ್ ಬರುವುದಿಲ್ಲ. ಆಗ ಏನು ಮಾಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್ .— ಎಲ್ಲಾ ಸಮಿತಿಗಳಲ್ಲೂ ಎಲ್ಲರೂ ಬರುವುದಕ್ಕಾಗುವುದಿಲ್ಲ ಮತ್ತು ಹಾಗೆ ಮಾಡಲು ಸಾಧ್ಯವೂ ಇಲ್ಲ. ಆದಕ್ಕೆ ಸಮಿತಿಗಳಲ್ಲಿ ನಾಲ್ಕು ಜನ ಇರುವ ಕಡೆ ಐದು ಜನ ಇದ್ದು ಅನ್‌ರೆಪ್ರಸೆಂಟೆಡ್ ಸೆಕ್ಷನಗೆ ಅವಕಾಶ ಕೊಡಿ ಎಂದು ಹೇಳಿದೆ.

ಇನ್ನು ಪೋಲಿಸ ಇಲಾಖೆ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳನ್ನು ಕೇಳಿದ್ದೇನೆ. ಕೆಲವು ಜನರು ಪೋಲೀಸ್ ಕಾನ್‌ಸ್ಟೇಬಲರುಗಳ ಬಗ್ಗೆ ಅವರ ಅನುಕಂಪವನ್ನು ತೋರಿಸಿ ಅವರಿಗೆ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕೆಂದು ಇನ್ನೂ ಕೆಲವು ಮಾನ್ಯ ಸ್ನೇಹಿತರು ಇವರು ಕೆಲಸಗಳ ಬಗ್ಗೆ ಹೀಗೆ ಬೇರೆ ಬೇರೆ ರೀತಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅಭಿಪ್ರಾಯವನ್ನು ಇಲ್ಲಿ ತಿಳಿಸಿದರು ನಾನು ಇಲ್ಲಿನಮ್ಮ ಪೋಲೀಸ್ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಈ ಇಲಾಖೆ ಇರತಕ್ಕ ರೀತಿಯ ಬಗ್ಗೆ ಸ್ವಲ್ಪ ತಮಗೆ ಪರಿಚಯ ಮಾಡಿಕೊಡತಕ್ಕದ್ದು ಒಳ್ಳೆಯದು ಎಂದು ನನ್ನ ಭಾವನೆ. ನಮ್ಮ ರಾಜ್ಯದಲ್ಲಿ ಇರುವ ಪೋಲೀಸು ದಳಕ್ಕೂ ಇತರ ರಾಜ್ಯಗಳಲ್ಲಿರುವ ಪೋಲೀಸ್ ದಳಕ್ಕೂ ಹೋಲಿಸಿದರೆ ನಮ್ಮ ರಾಜ್ಯಗಳಲ್ಲಿ ಪೋಲೀಸರು ಅಂಡರ್ ಸ್ಟಾಫ್ ಎಂದು ಗೊತ್ತಾಗುತ್ತದೆ. ನಮ್ಮಲ್ಲಿರುವ ಜನಸಂಖ್ಯೆಗನುಗುಣವಾಗಿ ನಮ್ಮಲ್ಲಿ ಪೋಲೀಸರ ದಳ ಇಲ್ಲ ಇದನ್ನು ನಾವು ಐದನೇಫೈನಾನ್ಸ್ ಕಮಿಷನ್ ಮುಂದೆ ಕೂಡ ಹೇಳಿ ನಮ್ಮ ರಾಜ್ಯದಲ್ಲಿ ಪೋಲೀಸು ಅಂಡರ್ ಸ್ಟಾಫ್ ಇದ್ದಾರೆ. ಇದಕ್ಕಿಂತ ಹೆಚ್ಚು ತೆಗೆದುಕೊಳ್ಳಲು ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚು

(ಶ್ರೀ ಡಿ. ದೇವರಾಜ ಅರಸ್)

ದುಡ್ಡು ಬೇಕಾಗುತ್ತದೆ ಎಂದು ಅವರಿಗೂ ಹೇಳಿದ್ದೇವೆ. ನಮ್ಮ ರಾಜ್ಯದಲ್ಲಿರುವ ಒಂದೊಂದು ಪೋಲೀಸು ಸ್ಟೇಷನ್ ಸುಮಾರು 370.3 ಸ್ಕ್ವೇರ್ ಕಿಲೋಮೀಟರಗಳಷ್ಟು ನೋಡಿಕೊಳ್ಳಬೇಕು. ನಮ್ಮ ಕರ್ಣಾಟಕ ರಾಜ್ಯದಲ್ಲಿ ಈ ರೀತಿ ಇದ್ದರೆ ಕೇರಳದಲ್ಲಿ 146 ಕಿಲೋಮೀಟರು, ತಮಿಳುನಾಡಿನಲ್ಲಿ 158.8 ಕಿಲೋಮೀಟರುಗಳು ಮತ್ತು ಆಂಧ್ರ ಪ್ರದೇಶದಲ್ಲಿ 310.3 ಕಿಲೋಮೀಟರುಗಳು ಇದೆ. ನಮ್ಮ ಕರ್ಣಾಟಕ ರಾಜ್ಯದಲ್ಲಿ ಸಿವಿಲ್ ಪೋಲೀಸ್ ಸ್ಟೇಷನ್‌ಗಳು 1530 ಜನರಿಗೆ ಒಂದು ಪೋಲೀಸ್ ಸ್ಟೇಷನ್ ಇದೆ ಕೇರಳದಲ್ಲಿ ೧೩೯೮ ಜನಕ್ಕೆ ಒಂದು ಪೋಲೀಸು ಸ್ಟೇಷನ್ ಹಾಗೂ ಮಹಾರಾಷ್ಟ್ರದಲ್ಲಿ ೧೭೮೮ ಜನರಿಗೆ ಒಂದು ಪೋಲೀಸ್ ಸ್ಟೇಷನ್ ಇದೆ. ನಮ್ಮಲ್ಲಿರುವ ಪ್ರಜಾಸಂಖ್ಯೆಗಿಂತ ಇದು ಹೆಚ್ಚಾಯಿತು ಮತ್ತು ನಮ್ಮಲ್ಲಿ ಹತ್ತು ಕಿಲೋಮೀಟರಿಗೆ ಒಬ್ಬರು ಪೋಲೀಸ್ ಕಾನಸ್ಟೇಬಲ್ ಇದ್ದಾರೆ. ಆದರೆ ತಮಿಳುನಾಡಿನಲ್ಲಿ ೫.೨ ಕಿಲೋಮೀಟರಿಗೆ ಒಬ್ಬರು ಕಾನ್‌ಸ್ಟೇಬಲ್, ಕೇರಳದಲ್ಲಿ ೫.೩೪ ಕಿಲೋಮೀಟರಿಗೆ ಒಬ್ಬರು ಪೋಲೀ ಕಾನ್‌ಸ್ಟೇಬಲ್ ಮತ್ತು ೭.೧ ಕಿಲೋ ಮೀಟರಿಗೆ ಮಹಾರಾಷ್ಟ್ರದಲ್ಲಿ ಒಬ್ಬರು ಪೋಲೀಸ್ ಕಾನ್‌ಸ್ಟೇಬಲ್ ಇದ್ದಾರೆ ಹೀಗೆ ಯಾವ ರೀತಿಯಾಗಿ ಹೋಲಿಸಿದರೂ ನಮ್ಮಲ್ಲಿರುವ ಪೋಲೀಸರುಗಳು ಸಂಖ್ಯೆ ಬಹಳ ಕಡಿಮೆ ಇದೆ, ಪೋಲೀಸು ಅಂಡರ್‌ಸ್ಟಾಫ್ ಇದೆ. ಎನ್ನುವುದು ಸ್ಪಷ್ಟವಾಗುತ್ತದೆ. ಮತ್ತು ೧೯೭೨-೭೩ ರಲ್ಲಿ ನಾವೇನು ಖರ್ಚು ಮಾಡಿದ್ದೇವೆ. ಬೇರೆ ರಾಜ್ಯಗಳವರು ಏನು ಖರ್ಚು ಮಾಡಿದ್ದಾರೆ ಇದನ್ನು ಹೋಲಿಸಿದರೆ. ಆಂಧ್ರಪ್ರದೇಶದಲ್ಲಿ ೫.೪ ಪರ್ಸೆಂಟು ಎಂಬುದು ಅವರ ಬಡ್ಜೆಟ್ಟಿನಲ್ಲಿದೆ. ತಮಿಳುನಾಡಿನಲ್ಲಿ ೪.೪ ಪರ್ಸೆಂಟು ಇದೆ. ಮಹಾರಾಷ್ಟ್ರದಲ್ಲಿ ೬.೪ ಪರ್ಸೆಂಟು ಇದೆ. ಆದರೆ ನಮ್ಮ ಕರ್ನಾಟಕದಲ್ಲಿ ೩.೫ ಪರ್ಸೆಂಟು ಇದೆ ಇದೇ ರೀತಿ ಪೋಲೀಸರಿಗಾಗಿ ಎಕ್ಸ್‌ಪೆಂಡಿಚರು ಏನು ಮಾಡುತ್ತಿದ್ದೇವೆಂದರೆ ೭೨—೭೩ ನೇ ಸಾಲಿನಲ್ಲಿ ಆಂಧ್ರ ಪ್ರದೇಶದಲ್ಲಿ ೪.೧೬ ಪರ್ಸೆಂಟು, ಕೇರಳದಲ್ಲಿ ೪.೪೩ ಪರ್ಸೆಂಟು, ತಮಿಳುನಾಡಿನಲ್ಲಿ ೫.೯೩ ಪರ್ಸೆಂಟು, ಮಹಾರಾಷ್ಟ್ರದಲ್ಲಿ ೬.೭೪ ಪರ್ಸೆಂಟು ಮತ್ತು ನಮ್ಮ ಕರ್ಣಾಟಕದಲ್ಲಿ ೩.೫೪ ಪರ್ಸೆಂಟು ಎಂದು ಇದೆ. ನಮ್ಮಲ್ಲಿ ಅವರೇಜ್ ಕಾಸ್ಟ್

Sri M. S. Krishnan ; Per capita expenditure ಎಂದರೆ benefits wages and salaries, ಎಲ್ಲಾ ತೆಗೆದುಕೊಂಡು ಖರ್ಚುಮಾಡುತ್ತ ಇರವುದು ಎಂದು ಅರ್ಥವೇ

ಶ್ರೀ ಎಸ್. ಬಂಗಾರಪ್ಪ.—ಪೋಲಿಸಿನವರ ಪರ್ ಕ್ಯಾಪಿಟಾ ಇನ್‌ಕಂ ಹೇಳಿದರೆ ಒಳ್ಳೆಯದು.

ಶ್ರೀ ಡಿ ದೇವರಾಜ ಅರಸ್ :—ಇಷ್ಟು ಹೊತ್ತು ಭಾಷಣ ನಡೆದದ್ದು ಅದೇ ಅಲ್ಲವೇ ? ನೀವು ಹೆಚ್ಚಿಗೆ ಅನುಭವ ಪಡೆದಿದ್ದೀರಿ ತಮಿಳುನಾಡಿನಲ್ಲಿ ಪೋಲೀಸ್ ಮ್ಯಾನ್ ಖರ್ಚು ೬,೦೦೩. ಕೇರಳದಲ್ಲಿ ೫,೪೭೭ ಆಂಧ್ರ ಪ್ರದೇಶದಲ್ಲಿ ,, ೩,೩೦ ಮಹಾರಾಷ್ಟ್ರ ೪,೯೦೧ ಕರ್ನಾಟಕದಲ್ಲಿ ೪,೩೮೭. ಅದರಲ್ಲೂ ಕಡಿಮೆ ಮಾಡಿಕೊಂಡು ಬಂದಿದ್ದೇವೆ ಆಮೇಲೆ ಈ ವರ್ಷಗಳಲ್ಲಿ ನಮ್ಮ ಪೋಲೀಸ್ ಇಲಾಖೆ ಎಷ್ಟು ಸ್ಟ್ರೆಸಸ್ ಸ್ಟ್ರೇನ್ಸ್ ತಡೆಯಬೇಕಾಗಿ ಬಂದಿದೆ ಎಂದು ತಮಗೆ ಗೊತ್ತಿದೆ ಒಂದು ಕಡೆ ಡ್ರಾಟ್ ನೇರವಾಗಿ ಸಂಬಂಧ ಇಲ್ಲದೆ ಹೋದರೂ ಡ್ರಾಟ್, ನಿರುದ್ಯೋಗದಿಂದ ಕಳ್ಳತನಗಳು ಜಾಸ್ತಿಯಾಗಿವೆ. ಶ್ರೀ ನಾಗಣ್ಣನವರು ಅಂಕಿ-ಅಂಶಗಳನ್ನು ಕೊಟ್ಟು ಹೇಳಿದರು ಇಲ್ಲದೇ ಬಾರ್ಡರ್ ಡಿಸ್ಪ್ಯೂಟ್ಸಿನ ದೊಡ್ಡ ಗಲಾಟೆ ಆಯಿತು, ಫುಡ್ ರಯಟ್ಸ್ ೧೦-೨೦ ಕಡೆ ಗಲಾಟೆ ಆದುವು. ಮಧ್ಯೆ ಮಧ್ಯೆ ರಾಜಕೀಯಗಳಾಟ ಕೋಟಿಕ ಅನರಸ್ಟ ಇವುಗಳ ದೆಸೆಯಿಂದ ಸ್ಟ್ರೆಸಸ್ ಮತ್ತು ಸ್ಟ್ರೇನ್ಸ್ ಜಾಸ್ತಿ ಆಗಿವೆ, ಈ ರೀತಿ ಇದ್ದರೂ ಕೂಡ, ಪೋಲೀಸ ಇಲಾಖೆ ಒಳ್ಳೆಯ ಕೆಲಸ ಮಾಡಿದೆ. ತಾವೇ ಆಲೋಚನೆ ಮಾಡಿ by and large...—ಶರೀರವನ್ನು ಒಟ್ಟಾರೆ ನೋಡಿ ಅದು ಒಟ್ಟು ಏನು ಪ್ರತಿಬಿಂಬಿಸುತ್ತದೆ ಎನ್ನುವುದನ್ನು ನೋಡಬೇಕೇ ಹೊರತು ಪ್ರತಿಯೊಂದು ಅಂಗಾಂಗವನ್ನು ತೆಗೆದುಕೊಂಡು ನೋಡಿದರೆ ಹೇಗೆ ? ಎಲ್ಲಾ ಅಂಗಾಂಗಗಳೂ ಸರಿ ಇರತಕ್ಕ ಶರೀರ ಯಾರಿಗೂ ಇಲ್ಲ. ಎಲ್ಲಿರದೂ ಸ್ವಲ್ಪ ಹೆಚ್ಚು ಕಡಿಮೆ ಇದ್ದೇ ಇರುತ್ತದೆ,

ಹೋದ ವರ್ಷ ಒಂದೇ ರೀತಿಯಲ್ಲಿ ಎಂಪ್ಲಾಯೀಸ್ ಡೆಮಾನ್‌ಸ್ಟ್ರೇಷನ್, ಕಮ್ಯೂನಲ್ ರಯಟ್ಸ್, ಸ್ಟೂಡೆಂಟ್ಸ್ ಅನ್‌ರೆಸ್ಟ್ ೫೦೦ ೬೦೦ ಆಗಿದೆ. ಲೇಬರ್ ಅನರೆಸ್ಟ್ ೧೭೨ ಡೆಮಾನ್‌ಸ್ಟ್ರೇಷನ್ ಆಗಿದೆ. ೧೯೭೩ ನೇ ಸಾಲಿನಲ್ಲಿ ಸ್ಟೂಡೆಂಟ್ಸ್ ಡೆಮಾನ್‌ಸ್ಟ್ರೇಷನ್ ೫೦ , ಪೊಲಿಟಿಕಲ್ ಡೆಮಾನಸ್ಟ್ರೇಷನ್ ೨೧. ಕಮ್ಯೂನಲ್ ಇನಸಿಡೆಂಟ್ಸ್ ಮೇಜರ್ (೪) ಮೈನರ್ ,೫ ಎಂಪ್ಲಾಯೀಸ್ ಡೆಮಾನಸ್ಟ್ರೇಷನ ೧೭೦ ಹೀಗೆ ಇಷ್ಟೊಂದು ಜಾಸ್ತಿ ಆಗುತ್ತಾ ಇರುವುದರಿಂದ ಪೋಲೀಸ್ ಡಿಪಾರ್ಟ್‌ಮೆಂಟಿನ ಮೇಲೆ ಸ್ಟ್ರೇನ್ ಎಷ್ಟು ಇದೆ ಎಂದು ತಾವು ಯೋಚನೆ ಮಾಡಿ ಆದಾಗ್ಯೂ ತಾವು ಹೇಳುವದರಲ್ಲಿ ಭಿನ್ನಾ

ಅಭಿಪ್ರಾಯವಿಲ್ಲ ಅವರು ಜನರನ್ನು ಸರಿಯಾಗಿ ನೋಡಬೇಕು, ಎಲ್ಲರನ್ನೂ ಒಂದೇ ಸಮನಾಗಿ ಕಾಣಬೇಕು ಸೌಮ್ಯವಾಗಿ ವರ್ತಿಸಬೇಕು ಯಾರಾದರೂ ದೂರು ತೆಗೆದುಕೊಂಡು ಹೋದರೆ ಅವರಿಗೆ ತಕ್ಷಣ ಸಹಾಯ ಮಾಡಬೇಕು ಮತ್ತು ಇನ್ನೂ ಕೆಲವರು ಹಳೆಯ ಕಂದಾಚಾರ ಇಟ್ಟುಕೊಂಡು ಬಂದಿರುವ ಅಧಿಕಾರಿಗಳು ಇದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಇತ್ತೀಚಿಗೆ ಹೊಸ ವಾತಾವರಣ ಬರುತ್ತಿದೆ. ಸಬ್ ಇನ್ಸ್‌ಪೆಕ್ಟರ್ಸ್ ಲೆವಲಿನಲ್ಲಿ ರೆಕ್ರೂಟ್‌ಮೆಂಟ್ ಮಾಡುತ್ತಿರುವುದರಿಂದ ಹೆಚ್ಚು ವಿದ್ಯಾವಂತರು ಬರುತ್ತಿದ್ದಾರೆ. ಇಷ್ಟರವರೆಗೆ ಪೋಲೀಸ್ ಹೆಡ್ ಕಾನಸ್ಟೇಬಲ್ಸ್ by dint of service ಮೇಲೆ ಸಬ್ ಇನ್ಸ್‌ಪೆಕ್ಟರ್ ಆಗಿ ಬಂದಿರುತ್ತಾರೆ. ಸಬ್ ಇನ್‌ಸ್ಪೆಕ್ಟರ್ ಲೆವಲ್ ಜನರ ಸಂಪರ್ಕ ಪಡೆಯತಕ್ಕ ಕೇಂದ್ರ, ಅಲ್ಲಿ ಯೋಗ್ಯ ಜನತಿರಬೇಕೆಂದು ಹಲವು ಸುಧಾರಣೆಗಳನ್ನು ಮಾಡಿದ್ದೇವೆ. ೪—೬ ವರ್ಷಗಳಿಂದ ಸಬ್ ಇನ್‌ಸ್ಪೆಕ್ಟರ್ ಲೆವಲ್‌ನಲ್ಲಿ ಡೈರೆಕ್ಟ್ ರಿಕ್ರೂಟಮೆಂಟ್ ಮಾಡುತ್ತಿದ್ದೇವೆ ಈ ಹುದ್ದೆಗಳಿಗೆ ಗ್ರಾಜುಯೇಟ್ಸ್ ಡಬಲ್ ಗ್ರಾಜುಯೇಟ್ಸ್‌ಬರುತ್ತಿದ್ದಾರೆ. ಅವರಿಗೆ ಟ್ರೈನಿಂಗ್ ಕೊಡುತ್ತಿದ್ದೇವೆ ಇವರು ಬಹು ವಿಧದಲ್ಲಿ ಉತ್ತಮವಾಗಿದ್ದಾರೆ ಎಂಬ ನಂಬಿಕೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ :—ಸಬ್ ಇನ್‌ಸ್ಪೆಕ್ಟರುಗಳು ಕೆಲಸಕ್ಕೆ ಸೇರಲು ೨೫ ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. ಅದನ್ನು ಈಗ ದುಡಿಯಬೇಕು ಎಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್:—ನನಗೆ ತಿಳಿದ ಹಾಗೆ ಇದು ನಿಜವಲ್ಲದ ಮಾತು. ನಿಜ ಎನ್ನುವುದು ಆದರೆ ತೋರಿಸಿ.

ಶ್ರೀ ಎಂ. ಎಸ್. ಕೃಷ್ಣನ್:—ಹುಬ್ಬಳ್ಳಿಯಲ್ಲಿ ಪೋಲೀಸ್ ಸ್ಟೇಷನಲ್ಲಿ ಎಷ್ಟು ಕೊಡಬೇಕು ? ಎಷ್ಟು ಕೊಡುತ್ತಾರೆ ? ಕೇಳಿ ಅವರು ಎಲ್ಲವನ್ನೂ ಹೇಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್ :— ನೀವು ಅವರು ಹೇಳಿದ್ದನ್ನು ಕೇಳಿಕೊಂಡು ಹೇಳುತ್ತೀರಿ ಅವರು ತೆಗೆದುಕೊಳ್ಳುತ್ತಾ ಇರಬಹುದು, ಇವರು ಕೊಡುತ್ತಾ ಇರಬಹುದು.

ಶ್ರೀ ಕೆ. ಎಚ್. ಹನುಮೇಗೌಡ .— ತಾವು ಲಾರಿಯಲ್ಲಿ ೧೦ ಮೈಲಿಗೆ ಹೋದರೆ ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :— ಎಷ್ಟೋ ಸಾರಿ ಬಸ್ ಸಿಕ್ಕದೇ ಇರುವಾಗ ಲಾರಿಯಲ್ಲಿ ಹೋಗಿರಬಹುದು.

ಶ್ರೀ ಕೆ. ಎಚ್. ಹನುಮೇಗೌಡ :— ೧೦ ಮೈಲಿ ಹೋಗಿ, ಮಧ್ಯೆ ಒಂದು ಪೋಲೀಸ್ ಸ್ಟೇಷನ್ ಸಿಕ್ಕಿದರೆ ಆಗ ಅವರು ಏನು ಮಾಡುತ್ತಾರೆಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ — ಹೌದು ಲೇಜಿಸ್ಲೇಚರ್ ಹೋಮಿನಿಂದ ಊರಿಗೆ ಹೋಗುವಾಗ ಮುಂದೆ ಬಂದು ನಿಂತುಕೊಳ್ಳುವವರಿಗೆ ಒಂದು ರೂಪಾಯಿ ಎರಡು ರೂಪಾಯಿ ಕೊಟ್ಟು ಬಿಟ್ಟು ಹೋಗುವುದಿಲ್ಲವೆ ? ಅದನ್ನೆಲ್ಲಾ ಹೇಳಿಕೊಂಡು ಕೂತರೆ ಹೇಗೆ ? ನಿಮಗೆ ಯಾರು ಕೊಡಿ ಎಂದು ಹೇಳಿದರು ? ಅವರಿಗೇ ಸಂಬಳ ಕೊಡುವುದಿಲ್ಲವೇ ? ಅವರು ಕೇಳಿದತಕ್ಷಣ ೪ ರೂಪಾಯಿ ಕೊಟ್ಟು ಹೋಗುತ್ತೀರಿ ? ಇದು ಯಾವ ಧರ್ಮ ?

ಕ್ರೈಂ ರೇಟ್ ವಿಚಾರ ತಗೆದುಕೊಂಡರೆ, ಆಲ್ ಇಂಡಿಯಾ ಆವರೇಜ್ ಏನಿದೆ ಅದರ ಜೊತೆಗೆ ನಮ್ಮ ರಾಜ್ಯವನ್ನು ಹೋಲಿಸಿಕೊಂಡರೆ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಜೊತೆಗೆ ಹೋಲಿಸಿಕೊಂಡರೆ. ನಮ್ಮದು ಎಷ್ಟು ಕಡಿಮೆ ಇದೆ ಎಂದು ಗೊತ್ತಾಗುತ್ತದೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ one crime for every second ನಡೆಯುತ್ತದೆ. one crime for every 45 second in the United Kingdom and one crime for every 75 seconds in India ನಡೆಯುತ್ತದೆ. Whereas it is one crime for 1107 minutes in Karanataka ಅದೇ ರೀತಿ. Volume of crime ತೆಗೆದುಕೊಂಡರೆ. 500 for every lakh of popalation in United Kingdom 1058 for every lakh of population in United states and 173 73 in India Whereas it is only 121.3 in Karanataka State. ಇದರಲ್ಲೂ ನಾವು ಬೇರೆಯವರಿಗೆ ಕಂಪೇರ ಮಾಡಿದಾಗ ಬಹಳ ಮಟ್ಟಿಗೆ ನಮ್ಮ ಪೋಲೀಸ ಇಲಾಖೆಯ ಕಾರ್ಯ ತೀರಾ ಅಲ್ಲಗಳೆಯುವಂಥದೇನಲ್ಲ. ತೀರಾ ಮೆಚ್ಚದೇ ಹೋದರೂ ಪರವಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಇವು ಕೇಸಸ್ ರಿಜಿಸ್ಟರ್ ಆದುದು ಕೇಸುಗಳು ರಿಜಿಸ್ಟರ್ ಆಗದೇ ಇರುವುದನ್ನೆಲ್ಲಾ ಕಂಡುಹಿಡಿದಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಪ್ರತಿಯೊಂದು ಕಡೆಯೂ ಅದೇ ರೀತಿ ಅಂಕಿ ಅಂಶ ತಗೆದುಕೊಂಡಿರುವುದು.

ಶ್ರೀ ಕೆ. ಎಂ ನಾಗಣ್ಣ.— ೧೯೭೨ ನೇ ಸಾಲಿನಲ್ಲಿ ೩೦ ಸಾವಿರ ಚಿಲ್ಲರೆ ೧೯೭೩ ನೇ ಸಾಲಿನಲ್ಲಿ ೪೪ ಸಾವಿರ ಚಿಲ್ಲರೆ ಕ್ರೈಂ ಆಗಿವೆ. ಆದರೆ ಹೋದವರ್ಷ ೧೪ ಸಾವಿರ ಕ್ರೈಂಸ್ ಜಾಸ್ತಿ ಆಯಿತು.

ಶ್ರೀ ಡಿ. ದೇವರಾಜ ಅರಸ್.— ಇತ್ತೀಚೆಗೆ ಹವಾಮಾನ ಬದಲಾಗಿದೆ. ಬೆಲೆಗಳು ಜಾಸ್ತಿಯಾಗಿದೆ. ಡಾಟ್ ಸಿಚುಯೇಷನ್ ಡೆವಲಪ್ ಆಗಿದೆ. ಪದಾರ್ಥಗಳ ಅಭಾವ ಜಾಸ್ತಿಯಾಗುತ್ತದೆ ಕೆಲಸಗಾರರು ಮುಷ್ಕರ ಹೂಡಿ, ಕಾರ್ಖಾನೆಗಳಲ್ಲಿ ಉತ್ಪಾದನೆ ಕಡಿಮೆಯಾಗುತ್ತಾ ಇದೆ ಇವೆಲ್ಲಾ ಕಾರಣಗಳೂ ಇವೆ.

ಶ್ರೀ ಎಂ. ಎಸ್. ಕೃಷ್ಣನ್. —ಪೋಲೀಸರು ಎಷ್ಟು ಸಿಚುಯೇಷನ್ನನಲ್ಲಿ ಹೊಡೆದಿದ್ದಾರೆ. ?

ಶ್ರೀ ಡಿ. ದೇವರಾಜ ಅರಸ್ — ವಿನಾಕಾರಣ ಹೊಡೆಯುವುದಕ್ಕೆ ಬಿಡುತ್ತೀರಾ ? ಪೋಲೀಸರು ಕೆಲವು ವಿಚಾರದಲ್ಲಿ ದಕ್ಷತೆಯಿಂದ ಕೆಲಸ ಮಾಡಿದ್ದಾರೆ ಎನ್ನುವುದಕ್ಕೆ ಉದಾರಣೆಗಳು ಇವೆ.

ಬೆಂಗಳೂರು ಸಿಟಿಯಲ್ಲಿ Fabricating and forging of examination certificates ಮಾಡುತ್ತಾ ಇದ್ದಾರೆ. That racket was unearthed by the police, ಇದೇ ರೀತಿಯಾಗಿ Inter State Bank cheats ರಾಜಾಸ್ತಾನದಲ್ಲಿ ಇದ್ದರು. ನಂತರ U. P. Maharastra, Jammu, Kashmir and Bhihar ಎಲ್ಲಾಕಡೆ ಚೀಟ್ ಮಾಡಿ ಇಲ್ಲಿಗೆ ಬಂದಿದ್ದರು. false demands drafts ಮಾಡಿ signature ಫೋರ್ಜ್ ಮಾಡಿ ಬ್ಯಾಂಕುಗಳಿಂದ ಹಣ ತೆಗೆದುಕೊಳ್ಳುವುದು. ಆ ರೀತಿ ಮಾಡುತ್ತಿದ್ದರು. ಬೆಂಗಳೂರಿಗೆ ಬಂದ ಮೇಲೆ ಇವರನ್ನು ಹಿಡಿದಿದ್ದಾರೆ.

5-30 P. M.

ಶ್ರೀ ಕೋಣಂದೂರು ಲಿಂಗಪ್ಪ :—ಗ್ರಹಚಾರವಶಾತ್ ಸಿಕ್ಕಿ ಹಾಕಿಕೊಂಡರು.

ಶ್ರೀ ಡಿ. ದೇವರಾಜ್ ಅರಸ್ :—ಗ್ರಹಚಾರ್ ವಶಾತ್ ಸಿಕ್ಕಿಹಾಕಿಕೊಂಡರು ಎಂದು ಹೇಳುತ್ತಾ ಹೋದರೆ, ಗ್ರಹಚಾರವಶಾತ್ ಕೆಲವರು ಮೆಂಬರು ಆಗುತ್ತಾರೆ, ಮತ್ತೆ ಕೆಲವರು ಗ್ರಹಚಾರವಶಾತ್ ಮಿನಿಸ್ಟರು ಆಗುತ್ತಾರೆ. ಶ್ರೀಮಾನ್ ನಾಗಣ್ಣನವರು ಕ್ರೈಮ್ ಜಾಸ್ತಿಯಾಗಿದೆ ಎಂದು ಹೇಳಿದರು. ಇಲ್ಲ ಎಂದು ಹೇಳುವುದಿಲ್ಲ, ಜಾಸ್ತಿಯಾಗಿರುವುದು ನಿಜ ಕಾರಣಗಳು ಈ ರೀತಿ ಇವೆ. ನಮ್ಮ ಸಮಾಜದಲ್ಲಿ ಬದಲಾವಣೆಗಳು ಆಗುವ ವಾತಾವರಣದಲ್ಲಿ ಕ್ರೈಮ್ಸ್ ಜಾಸ್ತಿಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ :—ಮುಂದಿನ ವರ್ಷ ಹೇಗೆ ಆಗುತ್ತದೆ ?

ಶ್ರೀ ಡಿ. ದೇವರಾಜ್ ಅರಸ್ :—ಆನಂದರ ನಾವು ಸಂವತ್ಸರ ಕಾದು ನೋಡಿ.

ಶ್ರೀ ಕೋಣಂದೂರು ಲಿಂಗಪ್ಪ :— ಜಯವಾಗುತ್ತೈತೆ ; ಜಯವಾಗುತ್ತೈತೆ;

ಶ್ರೀ ಡಿ. ದೇವರಾಜ್ ಅರಸ್ :—ಬುಡುಬುಡುಕೆ ಬೇಕು ಎಂದರೆ ತರಿಸಿಕೊಡುತ್ತೇನೆ. ಮತ್ತೆ ಇತ್ತೀಚೆಗೆ ಡಿಟೆಕ್ಷನ್ ಕೋರ್ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ ಅದನ್ನು ತಕ್ಷಣ ಮಾಡುತ್ತಾ ಇದ್ದೇವೆ ಮತ್ತೆ ಇನ್ನು ಒಂದು Special investigation Agency ಮಾಡಿದ್ದೇವೆ. ಗುಲ್ಬರ್ಗಾ ಮತ್ತು ಬಿದರಿಗೆ ಸಂಬಂಧಪಟ್ಟ ಹಾಗೆ, ಇತ್ತೀಚೆಗೆ ಬಹಳ ಜನ ಡಕಾಯಿತಿಗಳು ಹೌಸ್ ಬ್ರೇಕಿಂಗ್ ಕ್ಯಾಟಲ್ ತೆಫ್ಟ್ ಇತ್ಯಾದಿ ಮಾಡುತ್ತಾ ಇದ್ದುದರಿಂದ ಒಂದು ಸ್ಪೆಷಲ್ ಇನ್‌ವೆಸ್ಟಿಗೇಷನ್ ಏಜನ್ಸಿ ಮಾಡಿ ಅದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ಕೂಡ ಹಾಕಿದ್ದೇವೆ. ಅವರನ್ನು ಹಾಕಿಂದಿಂದೀಚೆಗೆ ಯಾವಪ್ರಮಾಣದಲ್ಲಿ ಅಲ್ಲಿ ಕ್ರೈಮ್ಸ್ ಆಗುತ್ತಿತ್ತೋ ಅದರಲ್ಲಿ ೫೦ ಪರ್‌ಸೆಂಟ್ ಈ ಒಂದು ವರ್ಷದಿಂದ ಕಡಿಮೆಯಾಗಿದೆ.

ಶ್ರೀ ಎಂ ಎಸ್. ಕೃಷ್ಣನ್ :—ಕಮ್ಯುನಲ್ ಟ್ರಬಲ್ಸ್ ನಮ್ಮ ರಾಜ್ಯದಲ್ಲಿ ಕೆಲವು ಕಡೆ ಆಗಿದೆ. ಕಮ್ಯುನಲ್ ಟ್ರಬಲ್ಸ್ ಏನು ನಡೆದರೂ ಕೂಡ ಅವು ಆರಂಭವಾದ ಮೇಲೆ ಪೋಲೀಸಿನವರು ಬರುತ್ತಾರೆ.

ಆದರೆ ಸಿ. ಐ. ಡಿ. ಇನ್‌ಫರ್‌ಮೇಷನ್ ಮುಖಾಂತರ ಅವರಿಗೆ ಈ ಕೋಮುವಾರು ಘರ್ಷಣೆ ನಡೆಯು ವುದು. ಗೊತ್ತಿರುತ್ತದೆ, ಆದರೂ ಅವರೂ ಘರ್ಷಣೆ ಆರಂಭವಾದ ಮೇಲೆ ಬರುತ್ತಾರೆ ಈ ಕೋಮು ವಾರು ಘರ್ಷಣೆ ಆರಂಭವಾಗುವುದಕ್ಕೆ ಮುಂಚೆ to nip in the bud ಅದರ ಬಗ್ಗೆ ಏನಾದರೂ, ನಿರ್ದಿಷ್ಟ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ನಾವು ನಮ್ಮ ಆಫೀಸರ್‌ಗಳಿಗೆ ಆಗಿಂದಾಗ್ಗೆ ಹೇಳುತ್ತೇವೆ. ಏನೆಂದರೆ ಘರ್ಷಣೆಗಳು ಆದಮೇಲೆ ಹೋಗಿ ತಡೆಗಟ್ಟುವುದಕ್ಕಿಂತ ಮುಂಚೆ ಪೂರ್ವಭಾವಿಯಾಗಿ ಇನ್‌ಫರ ಮೇಷನ್ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಕೆಲವು ಕಡೆ We have been able to effectively control them ಗಲಾಟೆ ಆಗದೇ ಇರುವುದೇ ಅದಕ್ಕೆ ಸಾಕ್ಷಿ.

ಶ್ರೀ ಎಂ. ಎಸ್. ಕೃಷ್ಣನ್ :—ಅಂತಹ ಕಡೆ ಮೊದಲೇ ಹೋಗಿ ಪ್ರಿವೆಂಟ್ ಮಾಡಿದ್ದರೆ that will really be an effective work done then preventing it later on.

SRI D. DEVRAJ URS. —In toto I agree with you. ಗುಲ್ಬರ್ಗದಲ್ಲಿ ಕೆಲವು ಸಮಯದ ಹಿಂದೆ ಹೋಳಿ ಹಬ್ಬದಲ್ಲಿ ಗಲಾಟೆಯಾಗುವ ಸಂದರ್ಭದಲ್ಲಿ ಹಿಂದಿನ ಅನುಭವದ ಮೇಲೆ we were able to prevent it, ecause we were able to take some steps much earlier to this happening you know Gulbarga is proverbially a place of communal clash. This time we were abl to effectively avoid it. ಸ್ಟ್ರೆಸಸ್ ಮತ್ತು ಸ್ಟ್ರೇನ್ ಇರುವುದರಿಂದ ಒಂದೊಂದು ಕಡೆ ಲ್ಯಾಪ್ಸಸ್ ಆಗುತ್ತಿದೆ. ಅವರ ಕಂಡಿಷನ್ಸ್ ಇಂಪ್ರೂವ್ ಮಾಡಬೇಕಾಗಿದೆ. ಅವರ ಸ್ಟ್ರೆಸಸ್ ಮತ್ತು ಸ್ಟ್ರೇನ್ ಕಡಿಮೆ ಆದರೆ ಇಂತಹ ವಿಚಾರಗಳಲ್ಲಿ ಕಾನ್‌ಸೆಂಟ್ರೇಟೆಡ್ ಎಫರ್ಟ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಸರ್ಕಾರದ ಉದ್ದೇಶ.

In about 36 instances, we have been able to prevent successfully by taking prelimenary, precomitionery measures which would have been otherwise grown into conflagaration in the State, within this one year. That part of it is loked after by the Government as well as by the police department.

ಶ್ರೀ ಕೆ. ಎಂ. ನಾಗಣ್ಣ .—ರೋಡ್ ಆಕ್ಸಿಡೆಂಟ್ ಜಾಸ್ತಿಯಾಗುತ್ತಿವೆ ಎಂದು ಪದೇ ಪದೇ ಹೇಳು ತಿದ್ದೇನೆ. ಸ್ಪೀಡ್ ಚೆಕ್ಕಿಂಗ್ ಸ್ಕ್ವಾಡ್ಸ್ ಹಾಕಿದರೆ ಆಕ್ಸಿಡೆಂಟ್ಸ್ ಡಿಮೆಯಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡಿದ್ದೀರಾ ?

ಶ್ರೀ ಡಿ. ದೇವರಾಜ್ ಅರಸ್ .—ರೋಡ್ ಆಕ್ಸಿಡೆಂಟ್ ಬಗ್ಗೆ ಹೇಳಬೇಕಾದರೆ ಸಾಮಾನ್ಯವಾಗಿ ಪೋಲೀಸ್ ಸ್ಕ್ವಾಡ್ ಹೋಗುವುದರಿಂದ ಅವು ಕಡಿಮೆಯಾಗುವುದಿಲ್ಲ. ನಮ್ಮಲ್ಲಿ ಯಾವುದೋ ಒಂದು ಕಾಲದಲ್ಲಿ ಎತ್ತಿನ ಗಾಡಿ ಓಡಾಡುತ್ತಿದ್ದ ಟ್ರಾಕಿನಲ್ಲಿ ರಸ್ತೆ ಮಾಡಿದ್ದೇವೆ. ಹಿಂದೆ ಯಾವ ರೀತಿ ಅಲೈನ್ ಮೆಂಟ್ ಇದ್ದವೂ ಅದೇ ಅಲೈನ್‌ಮೆಂಟ್ ಈಗಲೂ ಇವೆ ಈ ಎತ್ತಿನ ಗಾಡಿ ಓಡಾಡುವ ರಸ್ತೆಯಲ್ಲಿ ೧೦೦ ಮೈಲಿ ಓಡುವ ವೆಹಿಕಲ್ಸ್ ಓಡಾಡಿಸುವುದಕ್ಕೆ ಹತ್ತಿದೆ. ಜೊತೆಗೆ ಮರ್ಸಿಡೀಸ್ ಲಾರಿಗಳು ಮತ್ತು ಲೇಟೆಸ್ಟ್ ಮಾಡಲ್ ಕಾರುಗಳು ಅಂತಹ ರೋಡಿನಲ್ಲಿ ಹೋದರೆ ಅವು ಸರಿಯಾಗಿ ಇರುತ್ತದೆಯೇ ? ಇದು ಒಂದು ಕಡೆ. ಇನ್ನು ಒಂದು ಕಡೆ ಜನರು ರೋಡ್ ಸೆನ್ಸ್ ಇಲ್ಲದೆ ರಸ್ತೆ ಮಧ್ಯೆ ನಡೆದುಕೊಂಡು ಹೋಗುತ್ತಿರುತಾರೆ ಹಾರನ್ಸ್ ಮಾಡಿದರೆ ನಿಮಗೇ ಹೊಡೆಯುವುದಕ್ಕೆ ಶುರು ಮಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ .—ನಮ್ಮ ಬಟ್ಟೆ ನೋಡಿದರೆ ಇನ್ನು ಬಯ್ಯುತ್ತಾರೆ.

SRI D. DEVRAJ URS.—They feel it is their right to go in the middle of the road. ಬಂಗಾರಪ್ಪನವರು ಹೇಳಿಕೊಟ್ಟರು ಎಂದು ಕಾಣುತ್ತದೆ. They think that it is the birth right of every individual is to go in the middle of the road. ಇದು ನನ್ನ ರಸ್ತೆ ಮಧ್ಯೆ ಕಾರು ಬಂದರೆ ನಾನು ಹೋಗುವವರೆಗೂ ತಡೆದು ಕೊಂಡು ಹೋಗಬೇಕು ಎನ್ನುವ ಭಾವನೆ ಇದೆ. ಅಂಥಸಂದರ್ಭದಲ್ಲಿ ರೋಡ್ ಆಕ್ಸಿಡೆಂಟ್ ಆಗುತ್ತವೆ. ನೆನ್ನೆ ದಿವಸ ನಾನು ಬರುತ್ತಾ ಇರಬೇಕಾದರೆ, ಮೂರು ರೋಡ್ ಆಕ್ಸಿಡೆಂಟ್ ಆಗಿದ್ದವು. ರಸ್ತೆ ಚಿಕ್ಕದು, ಲಾರಿಗಳ ಸೈಜು ವಿಪರೀತ, ಉದ್ದವಾಗಿರುತ್ತವೆ. ಒಂದು ಕಾಲಕ್ಕೆ ಲೈಟ್ ಟಿನ್ ಮೇಲೆ ಹಾಕಬಾರದು

ಎಂದು ಕಾನೂನು ಇತ್ತು. ಈಗ 20 ಟನ್‌ವರೆಗೆ ಸಾಮಾನು ಹಾಕುತ್ತಾರೆ. ಒಂದು ಲಾರಿ ರಸ್ತೆಯ ತುಂಬಾ ತುಂಬಿಕೊಂಡಿರುತ್ತದೆ. ಲಾರಿ ಹೋಗುವುದಕ್ಕೆ ವಿಶಾಲ ರಸ್ತೆಗಳಿಲ್ಲ. ಇನ್ನು ಈ ಪೋಲೀಸ್ ಸ್ಕ್ವಾಡ್ ಹೋಗಲಿ ಎಂದರೆ ಇಂಥ ಸಂದರ್ಭದಲ್ಲಿ ಆಕ್ಸಿಡೆಂಟ್ ತಪ್ಪಿಸುವುದಕ್ಕಾಗುವುದಿಲ್ಲ.

ಶ್ರೀ ಕೆ ಎಂ. ನಾಗಣ್ಣ.—ರಸ್ತೆಯೊಳಗೆ ಸ್ಪೀಡ್ ಜಾಸ್ತಿ ಹೋಗದಂತೆ ಚೆಕ್ ಮಾಡಬೇಕು, ಜಾಸ್ತಿ ಸ್ಪೀಡ್ ಹೋಗುವವರ ಮೇಲೆ ಕ್ರಮ ತೆಗೆದುಕೊಂಡರೆ ಸ್ವಲ್ಪ ಆಕ್ಸಿಡೆಂಟ್ ಕಡಿಮೆಯಾಗಬಹುದು.

ಶ್ರೀ ಡಿ. ದೇವರಾಜ್ ಅರಸ್.—ಜನ ಇರುವ ಕಡೆ ಕಾರಿನಲ್ಲಿ ಸರಿಯಾಗಿ ಹೋಗುತ್ತಾ ಇರಬಹುದು ನೀವು ಪ್ರಾಪರ್ ವೇನಲ್ಲಿ ಹೋಗುತ್ತಾ ಇದ್ದರೂ ಅಕಸ್ಮಾತ್ ಸೈಕಲ್ ನಾಯಿ, ಕತ್ತೆ, ಮನುಷ್ಯ ಬಂದು ಸಿಕ್ಕಿ ಹಾಕಿಕೊಂಡರೆ ಅಲ್ಲೇ ನಿಮ್ಮನ್ನು ಹಿಡಿದು ಕೊಲೆ ಮಾಡುವ ಸ್ಥಿತಿಗೆ ಬರುತ್ತದೆ. ಬೇರೆ ಪಾಶ್ಚಿಮಾತ್ಯ ದೇಶಗಳಲ್ಲಿ ಹೇಗೆ ನಡೆಯುತ್ತದೆ ಎಂದರೆ ಉದಾಹರಣೆಗೆ ಲಂಡನ್‌ನಲ್ಲಿ ನಡು ಬೀದಿಯೊಳಗೆ ಆಕ್ಸಿಡೆಂಟ್ ಆದರೆ ಅವರ ಪಾಡಿಗೆ ಅವರು ಹೋಗುತ್ತಾ ಇರುತ್ತಾರೆ ಪೋಲೀಸಿನವರು ಮಾಡಬೇಕಾದುದನ್ನು ಬಂದು ಮಾಡುತ್ತಾರೆ. ಒಬ್ಬರೂ ತಿರುಗಿ ನೋಡುವುದಿಲ್ಲ. ಇಲ್ಲಿ ಸಣ್ಣ ಆಕ್ಸಿಡೆಂಟ್ ಆದಕೂಡಲೇ ಸಾವಿರಾರು ಜನ ಮುತ್ತಿಕೊಂಡು ಬಿಡುತ್ತಾರೆ. ಪೋಲೀಸಿನವರನ್ನು ಏನುಮಾಡುವುದಕ್ಕೂ ಬಿಡುವುದಿಲ್ಲ. ಅಲ್ಲಿ ಜನರಿಗೆ ರೋಡ್ ಸೆನ್ಸ್ ಇದೆ, ರೂಲ್ಸ್ ಸೆನ್ಸ್ ಸೆನ್ಸ್ ಇದೆ, ಕಾನೂನು ರೀತಿ ನಡೆಯಬೇಕು ಎನ್ನುವುದು ಗೊತ್ತಿದೆ ಸ್ವಲ್ಪಮಟ್ಟಿಗೆ ನಮ್ಮ ಮಲೆನಾಡಿನ ಗುಣ ಹೇಳುತ್ತೇನೆ. ಮುತ್ತು ಕೊಡಗು, ಶಿವಮೊಗ್ಗ ಕಡೆ ನೋಡಿದ್ದೇನೆ. ಮಕ್ಕಳು ಸ್ಕೂಲಿಗೆ ಹೋಗಬೇಕಾದರೆ, ರಸ್ತೆಯ ಪಕ್ಕದಲ್ಲಿ ಹೋಗುತ್ತವೆ ಇಲ್ಲಿ ನಡು ದಾರಿಯಲ್ಲೇ ಹೋಗುತ್ತವೆ. ಚಿಕ್ಕ ಮಕ್ಕಳಿಗೆ ಸೆನ್ಸ್ ಇರಬೇಕಾದರೆ ತರಪೇತು ಆಗಿರತಕ್ಕಂಥ ಜನಾಂಗ ಇದ್ದರೆ ಆಗ ಇದೆಲ್ಲಾ ಸರಿ ಹೋಗುತ್ತದೆ. Why should we not insist? ನಮ್ಮ ಈ ಸಿಟಿಯಲ್ಲಿ ದನಗಳು, ನಾಯಿಗಳು, ಕತ್ತೆಗಳು ಬೇಕಾದಷ್ಟಿವೆ. ಕಾರ್ಪೊರೇಷನ್‌ನವರು ನಾಯಿಗಳನ್ನು ಹಿಡಿಯುವುದಕ್ಕೆ ಹೋದರೆ. ಅವರನ್ನೇ ಹಿಡಿದು ಕೊಂಡು ಹೊಡೆಯುವುದಕ್ಕೆ ಬರುತ್ತಾರೆ. ಕೋತಿಗಳನ್ನು ಹಿಡಿಯುವುದಕ್ಕೆ ಹೋದರೆ. ಆಂಜನೇಯನನ್ನು ಹಿಡಿಯಬೇಡಿ ಎಂದು ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ಟ್ರೆಸಸ್ ಎಂಡ್ ಸ್ಟ್ರೈನ್ಸ್‌ಬಗ್ಗೆ ಹೇಳಿದಿರಿ, ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಇದು ಜಾಸ್ತಿಯಾಗಿದೆಯೆನ್ನುವುದನ್ನು ತಾವೂ ಒಪ್ಪಿಕೊಳ್ಳುತ್ತೀರಿ. ಬರುವ ದಿವಸಗಳಲ್ಲಿ ಸ್ಟ್ರೆಸಸ್ ಅಂಡ್ ಸ್ಟ್ರೈನ್ಸ್ ಜಾಸ್ತಿಯಾಗುತ್ತದೆಯೋ ವಿನಾ ಕಡಿಮೆಯಾಗುವುದಿಲ್ಲ. ಅವರಿಗೆ ಇಂಪ್ರೂವ್‌ಮೆಂಟ್ ಆಫ್ ಕಂಡೀಷನ್ಸ್ ಕೂಡ ಹೇಳಿದಿರಿ, ಏನು ಆ ಇಂಪ್ರೂವ್‌ಮೆಂಟ್ಸ್ ಆಫ್ ಕಂಡಿಷನ್ಸ್ ಎಂದು ಸ್ವಲ್ಪ ಸ್ಪಷ್ಟಪಡಿಸಿದರೆ ಒಳ್ಳೆಯದು. ನಾನು ಎರಡು ವಿಷಯ ಮಾತ್ರ ಹೇಳಿದೆ ಅದನ್ನು ತಿಳಿಸಿದರೆ ಒಳ್ಳೆಯದು. ಪೋಲೀಸರಿಗೆ ಇನ್‌ಕ್ರಿಮೆಂಟ್ ಕೊಟ್ಟಿಲ್ಲ, ಸಬ್ ಇನ್‌ಸ್ಪೆಕ್ಟರಿಗೆ ಒಂದು ಯೂನಿಫಾರಂ ಕೊಡುತ್ತೀರಿ. The sub-Inspectors themselves have to get it stitched.

ಶ್ರೀ ಡಿ. ದೇವರಾಜ್ ಅರಸ್.—ತಾವು ಹೇಳಿದ್ದು ಜ್ಞಾಪಕ ಇದೆ. ಅದನ್ನು ನೋಡಿಸಿದ್ದೇನೆ. ಯೂನಿಫಾರಂ ಬಗ್ಗೆ ಹೆಚ್ಚಿಗೆ ದುಡ್ಡು ಕೊಡಬೇಕು. ಪೇ ಸ್ಕೇಲ್ಸ್ ವ್ಯತ್ಯಾಸ ಇದೆ, ಆದನ್ನು ಗಮನಿಸುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಯೂನಿಫಾರಂ ಅನ್ನು ಅವರೇ ಸ್ಟಿಚ್ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದವರೇ ಸ್ಟಿಚ್ ಮಾಡಿಸಿಕೊಡಬೇಕು ಎಂದು ಗೊತ್ತು ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಬಟ್ಟೆ ಒಗೆಯುವುದಕ್ಕೆ ಅಲೋಯನ್ಸ್ ಕೊಡುತ್ತಾ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಲೋಯನ್ಸ್ ಕೊಡಬೇಕು ಎಂದು ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದುವರೆಗೆ ಸಬ್ ಇನ್‌ಸ್ಪೆಕ್ಟರ್ ಅವರೇ ಇನ್‌ಸ್ಪೆಕ್ಟರ್ ಸ್ಟಿಚ್ ಮಾಡಿಸಿಕೊಳ್ಳುತ್ತಿದ್ದಾರೆ.

SRI D. DEVARAJ URS.—I am talking of Constables. As regards Sub-Inspectors, now that point is before the Government. We want to maintain modern equipment and wireless sets in as large area as

possible. For modernisation of police force that is for the purchase of Wireless equipment and Training aids we have spent about Rs. 17 lakhs last year. Previous to that, we have spent Rs. 22 lakhs. Another research unit has been opened now to continuously find out ways and means of improving the Police Administration in all its aspects. Communication facilities ಗೋಸ್ಕರ ಕೆಲವು ಕಡೆ ಕಂಟ್ರೋಲ್ ರೂಮ್ಸ್, ವೈರ್‌ಲೆಸ್ ಸೆಟ್ಸ್ ಇಟ್ಟುಕೊಂಡಿದ್ದೇವೆ. We have got Mobile Patrols in about 13 Cities Tele-printers service ಧಾರವಾಡ, ಮಂಗಳೂರಿನಲ್ಲಿ ಈಚೆಗೆ ಹಾಕಿದ್ದೇವೆ. ಇನ್ನೂ ೪೦ ಪರ್ಸೆಂಟ್ ಮನೆಗಳನ್ನು ಕಟ್ಟಬೇಕಾದ್ದಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಬೇರೆಯುವರಿಗೆ ಕಟ್ಟಿರುವ ಮನೆಗಳನ್ನು ಇವರು ಅಕ್ಕ್ಯುಪೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ, ಇದು ತಪ್ಪಬೇಕು.

SRI D. DEVARAJ URS.—There is another point. We are publishigg Quarterly Police Journals.

ಜುಡಿಷಿಯಲ್ ಸ್ಟ್ರಿಕ್ಚರ್ಸ್ ಆಗಿಂದಾಗ್ಗೆ ಕೋರ್ಟಿನಲ್ಲಿ ಮಾಡುತ್ತಾರೆ. ಪ್ರತಿಯೊಂದು ಜುಡಿಷಿಯಲ್ ಸ್ಟ್ರಿಕ್ಚರ್ ಯಾವ ಅಧಿಕಾರಿ ಮೇಲೆ ಮಾಡುತ್ತಾರೆ. ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಕೂಡ ನಾವು ನೋಡುತ್ತಿದ್ದೇವೆ. ಇತ್ತೀಚೆಗೆ ಪೋಲೀಸ್ ಇಲಾಖೆಯು ಕೆಲಸಕಾರ್ಯಗಳ ಸಂಧಾರಣೆ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮತ್ತೆ ಡೈರಕ್ಟೊರೇಟ್ ಆಫ್ ಪ್ರಾಸಿಕ್ಯೂಷನ್. ಶ್ರೀಮಾನ್ ನಾಗಣ್ಣನವರು ಹೇಳಿದಹಾಗೆ ಕ್ರೈಮ್ಸ್ ಕೇಸಸ್‌ನ್ನು ಕೋರ್ಟಿಗೆ ತೆಗೆದುಕೊಂಡು ಹೋದರೆ, ಪ್ರಾಸಿಕ್ಯೂಷನ್ ಇಲ್ಲದೆ ಹೋಗುತ್ತವೆ. ಪ್ರಾಸಿಕ್ಯೂಷನ್ ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಪ್ರತ್ಯೇಕವಾಗಿ ಡೈರಕ್ಟೊರೇಟ್ ಆಫ್ ಪ್ರಾಸಿಕ್ಯೂಷನ್ ಮಾಡಿದ್ದೇವೆ. ಸಬ್ ಇನ್ಸ್‌ಪೆಕ್ಟರ್ ಲೆವೆಲ್‌ನಲ್ಲಿ ಟ್ರೈನಿಂಗ್ ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಕಾನ್‌ಸ್ಟೇಬಲರಿ ಇಂಪ್ರೂವ್ ಮಾಡುವ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದವರನ್ನು ರೆಕ್ರೂಟ್‌ಮೆಂಟ್ ಮಾಡುವಾಗ ತೆಗೆದುಕೊಳ್ಳಬೇಕು, ಎಜುಕೇಷನ್ ಕ್ವಾಲಿಫಿಕೇಷನ್ ಉತ್ತಮವಾಗಲಿ ಎಂದು ಹೇಳಿದ್ದಾರೆ, ಅದನ್ನೂ ಕೂಡ ಮಾಡಿದ್ದೇವೆ. ಇನ್ನು ಜೈಲ್ ರಿಫಾರ್ಮ್ಸ್ ಬಗ್ಗೆ ಹೇಳಿದರು, ಊಟ ಸರಿಯಿಲ್ಲ ಎಂದು. ಬಹುಶಃ ಅವರು ಊಟಮಾಡಿಕೊಂಡು ಹೋಗಿದ್ದರೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ,—ಬನ್ನಿ ಸ್ವಾಮಿ ಜೈಲಿಗೆ ಹೋಗೋಣ, ಅಲ್ಲಿ ೮ ದಿವಸ ಇದ್ದು ಬರೋಣ,

ಶ್ರೀ ಡಿ. ದೇವರಾಜ ಅರಸ್.—ಊಟ ಕೊಡುತ್ತಾ ಇರುವುದು ಸರಿಯಿಲ್ಲ ಎಂದು ಏನು ಹೇಳುತ್ತಾರೊ ಅದನ್ನು ದಯವಿಟ್ಟು ಸರಿಯಾಗಿ ತಿಳಿದು ಹೇಳಿ. ಸುಮ್ಮನೆ ಲೋಕಾಭಿರಾಮವಾಗಿ ಹೇಳಬೇಡಿ. ಒಟ್ಟು ಆಹಾರ ಅವರಿಗೆ ಕೊಡುವುದು ೨೪ ಔನ್ಸ್, ಅದರಲ್ಲಿ ರೈಸ್ ಪ್ರತಿಯೊಬ್ಬರಿಗೂ ೪ ಔನ್ಸ್, ಡಾಲ್, ಪಲ್ಸ್ ೪ ಔನ್ಸ್, ವೆಜಿಟಬಲ್ ೪ ಔನ್ಸ್ ಕೊಡುತ್ತಾ ಇದ್ದೇವೆ, We have been giving meat once in a week. ಇದರ ಜೊತೆಗೆ ಬಟರ್ ಮಿಲ್ಕ್, ಕರೀ ಪೌಡರ್ ಕೊಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಜೊತೆಯಲ್ಲಿ ಬಂದು ಅಲ್ಲಿ ಏನು ಕೊಡುತ್ತಿದ್ದಾರೆಂಬುದನ್ನು ನೋಡಬೇಕು.

ಶ್ರೀ ಡಿ. ದೇವರಾಜ ಅರಸ್. ಅವರ ಅಭಿಪ್ರಾಯದಲ್ಲಿ ಹಾಗೆ ಇರಬಹುದು. ಕೆಲವು ಕಡೆ ರೇಷನ್ಸ್ ಸರಿಯಾಗಿ ಉಪಯೋಗವಾಗದೇ ಇರಬಹುದು ಅದನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ. ಪೋಲೀಸ್ ಮ್ಯಾನ್ಯುಯಲ್‌ನಲ್ಲಿ ಪ್ರಿಸ್ಕ್ರೈಬ್ ಮಾಡಿರುವ ಪ್ರಕಾರ ಇಷ್ಟು ಕ್ವಾಂಟಿಟಿ ಫುಡನ್ನು ಕೊಡುತ್ತಿದ್ದೇವೆ ಅದಕ್ಕಾಗಿ ಇಷ್ಟು ಹಣ ಖರ್ಚಾಗುತ್ತಿದೆ. ತಾವು ಹೇಳುವ ಹಾಗೆ ಕೆಲವು ಸಂದರ್ಭದಲ್ಲಿ ಅದು ತಲುಪದೇ ಇರಬಹುದು. I shall certainly look into that matter.

ಇನ್ನು ಎಕ್ಸೈಜ್ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾದದ್ದು ಇದೆ. ಆಗಿಂದಾಗ್ಗೆ ಈ ಮಾನ್ಯ ಸಭೆಯಲ್ಲಿ ಮನೆಗಳು ಇದ್ದ ಕಡೆಗಳಲ್ಲಿ ಅನೇಕ ಸೇಂದಿ ಅಂಗಡಿಗಳು ಇವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದಕ್ಕಾಗಿ ನಾವು ಈಗಾಗಲೇ ೩೦-೪೦ ಅಂಗಡಿಗಳನ್ನು ಬದಲಾಯಿಸುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಒಂದೊಂದು ಸಾರಿ ಏನಾಗುತ್ತದೆ ಎಂದರೆ, ಅವರು ಹಿಂದಿನಿಂದ ಅಂಗಡಿ

(ಶ್ರೀ ಡಿ. ದೇವರಾಜ ಅರಸ್)

ಗಳನ್ನು ಪ್ರಾರಂಭಿಸಿಕೊಂಡು ಬಂದುಬಿಟ್ಟಿರುತ್ತಾರೆ, ಅಂಥವರು ಆ ಸ್ಥಳವನ್ನು ಬಿಡುವುದಕ್ಕೆ ಸಿದ್ಧರಿರುವುದಿಲ್ಲ.

ಇನ್ನು ಟಾಡಿ ಸ್ವಲ್ಪ ಅಡಲ್ಟ್ರೇಷನ್ ಮಾಡುತ್ತಿದ್ದಾರೆಂದು ತಾವು ಹೇಳಿದಿರಿ. ಅದರಲ್ಲಿ ಸತ್ಯಾಂಶವಿದೆ. ಕ್ಲೋರಾಲ್ ಹೈಡ್ರೇಜನ್ನು ಹೆಚ್ಚಾಗಿ ಮಿಕ್ಸ್ ಮಾಡಿ ಮಾರುತ್ತಿದ್ದಾರೆ. ಅದು ಶರೀರಕ್ಕೂ ಒಳ್ಳೆಯದಲ್ಲ. We have booked about 30 cases. ಏನು ಮಾಡಿದರೂ ಮ್ಯಾನುಫ್ಯಾಕ್ಚರಿಂಗ್ ಸೆಂಟರ್ ಮಾಡಿಕೊಂಡು ಮಾಡುತ್ತಿದ್ದಾರೆ. ಮತ್ತೆ ಇಲಿಸಿಟ್ ಡಿಸ್ಟಿಲೇಷನ್ ಬೆಂಗಳೂರಿನಲ್ಲಿ ಹೆಚ್ಚಾಗಿದೆ ಎಂದು ಹೇಳಿದರು. ಅದನ್ನು ನಾವು ಇತ್ತೀಚೆಗೆ ಬಹಳ ಮಟ್ಟಿಗೆ ಕಡಿಮೆ ಮಾಡುವುದಕ್ಕೆ ಸರ್ವಪ್ರಯತ್ನ ಮಾಡುತ್ತಿದ್ದೇವೆ. ಪೋಲೀಸ್ ಸ್ಕ್ವಾಡ್, ಎಕ್ಸೈಜ್ ಸ್ಕ್ವಾಡ್‌ನವರು ಹೋಗಿ ಹಿಡಿದು ಗಲಾಟೆ ಹಚ್ಚಿದ್ದಾರೆ. ಈಚೆಗೆ ಒಂದು, ಒಂದೂವರೆ ವರ್ಷದಿಂದ ಸಾಧ್ಯವಾದಷ್ಟು ಹಿಡಿಯುವುದಕ್ಕೆ ಪ್ರಾರಂಭ ಮಾಡಿದುದರಿಂದ ಕಡಿಮೆಯಾಗಿದೆ We have booked about nearly 100 cases up to now. ಈ ವರ್ಷ ೧೩೪ ಕೇಸಸ್ಸನ್ನು ಬುಕ್ ಮಾಡಿದ್ದೇವು. ಅದೇ ರೀತಿ ಲಿಕ್ಕರನ್ನು ೧೯೭೨—೭೩ನೇ ಸಾಲಿನಲ್ಲಿ ೩೨೨೦ ಲೀಟರ್ಸ್ ೧೯೭೩—೭೪ರಲ್ಲಿ ಎಂಟೂವರೆ ಸಾವಿರ ಲೀಟರ್ಸ್‌ನಷ್ಟು ಸೀಜ್ ಮಾಡಿದ್ದೇವು. ೧೯೭೧—೭೨ನೇ ಸಾಲಿನಲ್ಲಿ ಮೂವತ್ತಾರೂವರೆ ಸಾವಿರ ಲೀಟರ್ ೧೯೭೨—೭೩ನೇ ಸಾಲಿನಲ್ಲಿ ೭೮,೪೮೦ ಲೀಟರ್ಸ್, ಆಮೇಲೆ ೧೯೭೩—೭೪ನೇ ಸಾಲಿನಲ್ಲಿ ೮೫ ಸಾವಿರ ಲೀಟರ್ಸ್ ವಾರ್ ಡೆಸ್ಟ್ರಾಯ್ ಮಾಡಿದರು.

ಮತ್ತೆ ನಮ್ಮ ಅಬ್ಕಾರಿ ಇಲಾಖೆಯಿಂದ ಬರತಕ್ಕ ಸರ್ಕಾರದ ಆದಾಯ ೧೯೬೮—೬೯ರಲ್ಲಿ ಏನು ಇತ್ತು ಅಲ್ಲಿಂದ ಇಲ್ಲಿಯವರೆಗೆ ಹೇಗೆ ಬೆಳವಣಿಗೆ ಆಯಿತು ಎಂದು ನೋಡಿದರೆ ದುಡ್ಡು ಹೆಚ್ಚಾಗಿ ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಡ್ಡಾಯವಾಗಿ ಎಲ್ಲರೂ ಕುಡಿಯಲೇಬೇಕೆಂದು ಮಾಡಿದರೆ ಇನ್ನೂ ಹೆಚ್ಚಿಗೆ ದುಡ್ಡು ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇನ್ನು ಅರಾಕ್ ಕನ್‌ಸಂಪ್ಷನ್ ಎಷ್ಟು ಲೀಟರ್ ಖರ್ಚಾಗುತ್ತಿದೆಯೆಂದರೆ,

೧೯೭೦—೭೧ನೇ ಸಾಲಿನಲ್ಲಿ	...	೧,೭೬,೬೧,೩೩೬ ಲೀಟರ್ಸ್
೧೯೭೧—೭೨ನೇ ಸಾಲಿನಲ್ಲಿ	...	೨,೨೨,೬೭,೬೧೧ ಲೀಟರ್ಸ್
೧೯೭೨—೭೩ನೇ ಸಾಲಿನಲ್ಲಿ	...	೨,೬೬,೩೯,೭೪೪ ಲೀಟರ್ಸ್
೧೯೭೩—೭೪ನೇ ಸಾಲಿನಲ್ಲಿ	...	೪,೬೬,೬೧,೫೧೮ ಲೀಟರ್ಸ್

ಲಾಸ್ಟ್ ಇಯರ್ ಸ್ವಲ್ಪ ಕಡಿಮೆಯಾಗಿದೆ. ಇದರ ಜೊತೆಯಲ್ಲಿ you compare the income to the State on the same quantity more or less. ಇನ್ನು ೧೯೬೮—೬೯ರ ಟೋಟಲ್ ತೆಗೆದುಕೊಂಡರೆ ೧೩,೫೬,೧೩,೦೦೦ ರೂಪಾಯಿ, ೧೯೬೯—೭೦ರಲ್ಲಿ ೧೯ ಕೋಟಿ ೬೬ ಸಾವಿರ ರೂಪಾಯಿ ೧೯೭೦—೭೧ರಲ್ಲಿ ೨೦ ಕೋಟಿ ೩೮,೯೪,೫೦೦ ರೂಪಾಯಿ, ೧೯೭೧—೭೨ನೇ ಸಾಲಿನಲ್ಲಿ ೨೪,೬೪,೧೨,೪೦೦ ರೂಪಾಯಿ ೧೯೭೨—೭೩ನೇ ಸಾಲಿನಲ್ಲಿ ೩೧,೫೯,೧೪,೫೦೦ ರೂಪಾಯಿ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನೂ ಜಾಸ್ತಿ ಟ್ಯಾಕ್ಸ್ ಹಾಕಬೇಡ ಎಂದು ಯಾರು ಹೇಳುತ್ತಾರೆ ?

ಶ್ರೀ ಡಿ. ದೇವರಾಜ ಅರಸ್.—ಟ್ಯಾಕ್ಸ್ ಜಾಸ್ತಿ ಹಾಕಿಲ್ಲ, ವಿಚಾರ ಏನೂ ಗೊತ್ತಿರುವುದಿಲ್ಲ, ಸುಮ್ಮನೆ ಮಾತನಾಡುತ್ತೀರಿ. ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ದಯಮಾಡಿ ಕೇಳಿ. ಇಲ್ಲಿ ಕೂತುಕೊಂಡು ಅದಕ್ಕೆ ಹಣ ಕೊಡಲಿಲ್ಲ, ಇದಕ್ಕೆ ಹಣ ಕೊಡಲಿಲ್ಲವೆಂದು ಮಾತ್ರ ಹೇಳುತ್ತೀರಿ ಪೋಲೀಸಿನವರಿಗೆ ದುಡ್ಡು ಜಾಸ್ತಿ ಕೊಡಬೇಕೆಂದು ಹೇಳುತ್ತೀರಿ ಎಲ್ಲಿಂದ ಕೊಡಬೇಕು? ಎಲ್ಲಿಂದ ಸರ್ಕಾರಕ್ಕೆ ದುಡ್ಡು ಬರುತ್ತದೆಂಬುದರ ಕಡೆಗೆ ತಲೆ ಓಡುವುದಿಲ್ಲ. ನಮಗೆ ಹರಾಜಿನಿಂದ ಹಣ ಬರುತ್ತಿರುವುದು, ಟ್ಯಾಕ್ಸ್ ಅದಕ್ಕೆ ಹಾಕುತ್ತಿದ್ದೇವೆ. ಅದು ಬೇರೆ ವಿಚಾರ. ೧೯೭೦—೭೧ರಲ್ಲಿ ಇವರಿಂದ ಬರತಕ್ಕ ರೆವಿನ್ಯೂ ೨೦ ಕೋಟಿ ೩೮ ಲಕ್ಷ ರೂಪಾಯಿ ಬರುತ್ತದೆ. ೧೯೭೨—೭೩ರಲ್ಲಿ ಜಾಸ್ತಿಯಾಗಿದೆ. ಅದು ಎಷ್ಟೆಂದರೆ ೩೧,೫೯,೧೪,೫೦೦ ರೂಪಾಯಿ. ೧೯೭೩—೭೪ರಲ್ಲಿ ೩೮ ಕೋಟಿ ೪೫ ಲಕ್ಷ ರೂಪಾಯಿ. This year we havetestimated that it may go up to 38 Crores or little more. I can't say exactly the figures now. Auction ಕಂಪ್ಲೀಟ್ ಆಗಬೇಕು.

ಶ್ರೀ ಕೆ. ಪ್ರಭಾಕರ್.—ದಿನೇದಿನೇ ಕನ್‌ಸಂಪಷನ್ ಜಾಸ್ತಿಯಾಗಿರುವುದರಿಂದ ಕಲೆಕ್ಷನ್ ಎರಡು ಪಟ್ಟು ಆಗಬೇಕಾಗಿತ್ತು, ಅದರ ಬಗ್ಗೆ ಸ್ವಲ್ಪ ನಿಗಾ ಕೊಡಬೇಕು.

SRI D. DEVARAJ URS.—Consumption and sale of liquor remains more or less the same.

6-00 p.m.

During 1971—72 it was only Rs. 24 crores; now it has gone up Rs. 31 crores. The increase is 44 lakhs litres. But this year 1973—74, the quantum remaining the same, again there is an increase. There is an increase in revenue by another Rs. 6 crores on the whole. I think I have made that point clear.
ಇನ್ನು ದಯಾನಂದ ಸಾಗರ್‌ರವರು ನಾನು ಹೀಗೆ ಕೇಳಿದ್ದೇನೆ ಎಂದು ಹೇಳಿದರು. ತಮ್ಮಲ್ಲಿ ನಾನು ಒಂದು ಮನವಿ ಮಾಡಿಕೊಳ್ಳುತ್ತೇನೆ ಅಲ್ಲಿ ಅವರು ಹಾಗೆ ಹೇಳಿದರು, ಇವರು ಹೀಗೆ ಹೇಳಿದರು ಎಂತ ಇಲ್ಲಿ ಬಂದು ಮಾತನಾಡಿದರೆ ಕಷ್ಟವಾಗುತ್ತದೆ, ದಯಮಾಡಿ ಅದಕ್ಕೆ ಲಕ್ಷ್ಯ ಕೊಡಬಾರದು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ನಮ್ಮ ಸಮಾಜದಲ್ಲಿ ಜನ ಯಾವ ರೀತಿ ಇದ್ದಾರೆ ಎಂದರೆ ಅವನ ಮನೆ ದೋಸೆ ಹಾಗೆ ಇದೆ, ಹೀಗೆ ಇದೆ ಎಂದು ಹೇಳತಕ್ಕಂಥ ಸಭಾವ ಇದೆ. ಅವರು ಅಂಥಾ ಸಮಾಜದಲ್ಲಿ ಬೆಳೆದುದರಿಂದ ಈ ರೀತಿ ಮಾತನಾಡುತ್ತಾರೆಂದು ನನ್ನ ಭಾವನೆ. ಆದರೆ ನಾವೂ ಕೂಡ ಅದೇ ರಕ್ತದಲ್ಲಿ ಬೆಳೆದುಕೊಂಡು ಬಂದಿದ್ದೇವೆ. "We are a set of gossip mongers" ಅಲ್ಲಿ ೧೫ ಲಕ್ಷ ರೂಪಾಯಿಗೆ ಕಂಟ್ರಾಕ್ಟ್ ಕೊಟ್ಟುಬಿಟ್ಟರು, ಇಲ್ಲಿ ೨೦ ಲಕ್ಷ ರೂಪಾಯಿಗೆ ಕಾಂಟ್ರಾಕ್ಟ್ ಕೊಟ್ಟುಬಿಟ್ಟರು ಎನ್ನುವ ಮಾತನ್ನು ಹೇಳುತ್ತಾರೆ, ಹಾಗೆ ಅವರು ಹೇಳುವುದನ್ನೆಲ್ಲಾ ಏತಕ್ಕೆ ನಂಬುತ್ತೀರಿ? ಮಾತನಾಡುವ ಜನ ಪೆಟಿ ಮೆಂಡೆಡ್ ಆದರೆ ಹೇಗೆ ಆಗುತ್ತದೆ. ಅದನ್ನೆಲ್ಲಾ ನಾವು ಯೋಚನೆ ಮಾಡಬೇಡವೇ ? ಆದರೆ ಕಾಂಟ್ರಾಕ್ಟರ್ಸ್ ಮಾತನಾಡಿಕೊಂಡಿದ್ದರೆ ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ We can not help. ಒಟ್ಟನಲ್ಲಿ ಹೇಳುವುದಾದರೆ ಹೋದ ವರ್ಷದ ಇದರ ಟೋಟಲ್ ಅಮೌಂಟ್ ತೆಗೆದು ಕೊಂಡರೆ ಈ ವರ್ಷದ ಟೋಟಲ್ ಅಮೌಂಟ್ ಎಂದೆಂದಿಗೂ ಕಡಿಮೆಯಾಗುವುದಿಲ್ಲ.

ಶ್ರೀ ಆರ್. ದಯಾನಂದಸಾಗರ್.—ನಾನು ಹೇಳಿದ್ದು ಬೆಂಗಳೂರಿನಲ್ಲಿ ೫ ಲಕ್ಷ ರೂಪಾಯಿ ಕಡಿಮೆ ಯಾಗಿದೆ ಎಂದು.

ಶ್ರೀ ಡಿ. ದೇವರಾಜ ಅರಸ್,—ಬೆಂಗಳೂರಿನಲ್ಲಿ ಒಂದು ಕಡೆ ಕಡಿಮೆಯಾಗಿ ಇನ್ನೊಂದು ಕಡೆ ಜಾಸ್ತಿ ಬರುತ್ತದೆ. ಹೋದವರ್ಷ ಏನಾಯಿತು ಎಂದರೆ ಪೈಪೋಟಿಯಿಂದ ಜಾಸ್ತಿಯಾಯಿತು. ಅದಕ್ಕೆ ಕತೆ ಕಟ್ಟುವುದು ಬೇಡ. I would like the hon. member to go through it again. ೧೯೭೦—೭೧ರಲಿ ಏನು ಬಂತು ಅದನ್ನು ಕಂಪೇರ್ ಮಾಡಿದರೆ ತಮಗೆ ಗೊತ್ತಾಗುತ್ತದೆ. He have been consistently rising between Rs. 5 to 6 crores. At no time such a rise was there. The volume remains the same. Is it not an indication that were trying to do our best?

SRI R. DAYANANDA SAGAR—Why not do it Shopwise?

ಶ್ರೀ ಡಿ. ದೇವರಾಜ ಅರಸ್.—ಷಾಪ್‌ವೈಸ್ ಆಗಿ ಹರಾಜನು ಸೌತ್ ಕೆನರಾದಲ್ಲಿ ಒಂದು ಕಡೆ ಮತ್ತು ಬಳ್ಳಾರಿಯಲ್ಲಿ ಒಂದು ಕಡೆಯಲ್ಲಿ ಮಾಡಿದ್ದಾರೆ. ಅದನ್ನು ಎಕ್ಸ್‌ಪೆರಿಮೆಂಟಲ್ ಆಗಿ ಮಾಡಿದ್ದಾರೆ. ಏತಕ್ಕೆ ಆ ರೀತಿ ಮಾಡಿದ್ದಾರೆ ಎಂದರೆ ಸಣ್ಣ ಪುಟ್ಟ ಕಂಟ್ರಾಕ್ಟರುಗಳಿಗೆ ಅನುಕೂಲವಾಗಲಿ ಎಂದು ಮಾಡಿದ್ದಾರೆ. ಮೊದಲು ಷಾಪ್‌ವೈಸ್ ಹರಾಜು ಹಾಕುತ್ತಾರೆ, ಆಮೇಲೆ ತಾಲ್ಲೂಕುವೈಸ್ ಹರಾಜು ಹಾಕುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಒಂದು ಕಡೆ ಕಡಿಮೆ ಹಣ ಬಂದರೆ ಇನ್ನೊಂದು ಕಡೆ ಜಾಸ್ತಿ ಹಣ ಬರುತ್ತದೆ. ಒಟ್ಟಿನಲ್ಲಿ ಈ ಟಾಡಿಯಿಂದಿರುವ ಒಟ್ಟು ಮೊತ್ತದ ಹಣ ಹೋದವರ್ಷಕ್ಕಿಂತ ಏನೂ ಕಡಿಮೆಯಾಗುವುದಿಲ್ಲ, ಅದಕ್ಕಿಂತಲೂ ಜಾಸ್ತಿ ಬರುತ್ತದೆ. ಅದಲ್ಲದೆ ಈ ಸಾರಿ ಅರ್ರ್ಯಾಕ್ ಡ್ಯೂಟಿ ಬೇರೆ ಹಾಕಿದ್ದೇವೆ. ಅದರಿಂದ ೫ ೬ ಕೋಟಿ ರೂಪಾಯಿ ಹಣ ಬರುವ ನಿರೀಕ್ಷೆ ಇದೆ.

(ಶ್ರೀ ಡಿ. ದೇವರಾಜ ಅರಸ್)

I want to see that it is maintained. We want more money for ou development activities. ಇದರ ಬಗ್ಗೆ ಹಣಕಾಸಿನ ಮಂತ್ರಿಗಳು ಬಡ್ಜೆಟ್ಟಿನಲ್ಲಿ ಹೇಳಿರಬೇಕು.

ಮಾನ್ಯ ಅಧ್ಯಕ್ಷರೇ, ಟ್ಯಾಪರ್ಸ್ ಬಗ್ಗೆ ಕೂಲ್ಸು ಮಾಡಿಲ್ಲ ಎಂದು ಹೇಳಿದರು. ಪರ್ಟಿಕ್ಯುಲರಿ ನಾನು ಸೌತ್ ಕೆನರಾಕ್ಕೆ ಹೋಗಿದ್ದಾಗ ಅಲ್ಲಿ ಟ್ಯಾಪರ್ಸ್ ಎಕ್ಸ್‌ಪ್ಲಾಯಟ್ ಮಾಡುತ್ತಿದ್ದಾರೆಂದು ರೆಪ್ರೆಸೆಂಟೇಷನ್ ಬಂತು. ನಾನು ಅಲ್ಲಿರುವ ಸೌತ್ ಕೆನರಾ ಮೆಂಬರ್ಸ್‌ನ್ನು ಕರೆದು ಹೇಳಿದೆ. ಇದೇ ಬಗ್ಗೆ ಹೆಚ್ಚು ಮಾಹಿತಿ ಇದ್ದಾರೆ ಕೊಡಿ, ಮತ್ತು ಅದರ ಜೊತೆಗೆ ನಿಮ್ಮ ಸಲಹೆಗಳನ್ನೂ ಕೊಡಿ ಎಂದು ಹೇಳಿದ್ದೇನೆ. ಮತ್ತು ಅವರು ಏನು ಸಲಹೆಗಳನ್ನು ಕೊಡುತ್ತಾರೋ ಅದನ್ನು ಇಂಪ್ಲಿಮೆಂಟ್ ಮಾಡಬೇಕು ಎಂದು ಎಕ್ಸೈಜ್ ಕಮಿಷನರಿಗೆ ಹೇಳಿದ್ದೇನೆ ಬಹುಶಃ with certain modifications in the rules they are going to be implemented.

ಶ್ರೀ ಕಾಗೋಡು ತಿಮ್ಮಪ್ಪ.—ಟ್ಯಾಪರ್ಸ್ ವೆಲ್‌ಫೇರ್ ಫಂಡಿಗೆ ಸಂಬಂಧಪಟ್ಟಂತೆ ೧೯೫೫ನೇ ಇಸವಿಯಲ್ಲಿ ಕೇರಳದಲ್ಲಿ ಒಂದು ಆಕ್ಟ್ ಮಾಡಿದ್ದಾರೆ, ಅದೇರೀತಿ ಇಲ್ಲೂ ಮಾಡಿದರೆ ಅವರಿಗೆ ಅನುಕೂಲವಾಗುವುದಿಲ್ಲವೇ? ಅದನ್ನು ಎಕ್ಸಾಮಿನ್ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಅದರಿಂದ ಅನುಕೂಲವಾಗಬಹುದು. ತಾವು ಹೇಳಿದುದನ್ನೂ ಗಮನದಲ್ಲಿಟ್ಟುಕೊಳ್ಳೋಣ ಮತ್ತು ಕೇರಳದಲ್ಲಿ ಈ ಬಗ್ಗೆ ಒಂದು ಆಕ್ಟ್ ಇದೆ ಎಂದು ಏನು ಹೇಳಿದಿರಿ ಅದರ ಕಾಪಿಯನ್ನು ತರಿಸುತ್ತೇನೆ.

ಅಧ್ಯಕ್ಷರೇ, ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಮಾನ್ಯ ಸದಸ್ಯರು ಕೆಲವರು ಆ ಬಗ್ಗೆ ಮಾತನಾಡತಕ್ಕಂಥದ್ದರಲ್ಲಿ ಏನು ತೋರುತ್ತದೆ ಎಂದರೆ ಈ ಜನರಲ್ ಅಡ್ಮಿನಿಸ್ಟ್ರೇಷನ್ ಮೇಲೆ ಏನು ಒಂದು ಕಂಟ್ರೋಲ್ ಇಟ್ಟುಕೊಂಡಿರಬೇಕೋ ಅದು ಇಲ್ಲವಾದ್ದರಿಂದ ಯಾವ ಕೆಲಸವೂ ಕೂಡ ಸರಿಯಾಗಿ ಆಗುವುದಿಲ್ಲ ಮತ್ತು ಮಂತ್ರಿಗಳು ಯಾವುದನ್ನು ಅರ್ಡರ್ ಮಾಡಿದರೂ ಕೂಡ ಆ ಕೆಲಸ ನಿಧಾನವಾಗಿ ಆಗುತ್ತಾ ಇದೆ ಎನ್ನುವುದು ಅರ್ಥವಾಗುತ್ತದೆ ಇನ್ನೊಬ್ಬರು ಸದಸ್ಯರು ಬಹುಶಃ ಪ್ರಭಾಕರ್‌ರವರು ಅಂತ ಕಾಣುತ್ತದೆ ಅವರು ಏನು ಹೇಳಿದರು ಎಂದರೆ ಮಂತ್ರಿಗಳೂ ಕೂಡ ಅವರಿಗೆ ಸಲಾಂ ಹೊಡಿದುಕೊಂಡಿದ್ದಾರೆ, ಸ್ಕೂಲ್‌ಬಾಯ್ಸ್ ತರಹ ಮಾಡಿಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದರು. ಅದಕ್ಕೆ ನಾನು ತಮ್ಮನ್ನು ಕೇಳುತ್ತೇನೆ ಈ ಜನರಲ್ ಅಡ್ಮಿನಿಸ್ಟ್ರೇಷನ್ ಅನ್ನುವ ಡಿಪಾರ್ಟ್‌ಮೆಂಟ್ ಬೇಡವೇ ಎಂದು.

ಈ ಡಿಪಾರ್ಟ್‌ಮೆಂಟ್ ಇಲ್ಲದೇ ಹೋದರೆ ಏನಾಗುತ್ತದೆ ಎಂದರೆ, ಕಂಟ್ರೋಲ್ ಇಲ್ಲದೆ ಇದು ಹುಚ್ಚಾಪಟ್ಟೆಯಾಗುತ್ತದೆ. ಡಿಪಾರ್ಟಮೆಂಟ್‌ಗಳು ಇರಬೇಕು, ಆದರೆ ಇವುಗಳ ಸುಧಾರಣೆ ಏನು ಆಗಬೇಕು ಎನ್ನುವುದನ್ನು ಯೋಚನೆ ಮಾಡೋಣ. Let us not got the extent of even suggesting we don't want departments. ಹೇಳುವುದರಿಂದ ನಮಗೆ ಅನುಕೂಲಗಳು ಏನೂ ಆಗುವುದಿಲ್ಲ. ಮತ್ತು ಅಡ್ಮಿನಿಸ್ಟ್ರೇಷನ್ ಮೇಲೂ ಹತೋಟಿ ಇರುವುದಿಲ್ಲ. ಹೇಳುವವರು, ಕೇಳುವವರು ಯಾರೂ ಇಲ್ಲದ ಹಾಗೆ ಆಗುತ್ತದೆ.

ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್—ಎಷ್ಟು ವರ್ಷಗಳಿಂದ ಇದು ಇದೆ ಎನ್ನುವುದು ತಮಗೂ ಗೊತ್ತಿದೆ ಈಗ ಈ ಬಗ್ಗೆ ನಾವು ಯಾವ ಹಂತಕ್ಕೆ ಬಂದಿದ್ದೇವೆಂದರೆ, ರೆವಿನ್ಯೂ ಡಿಪಾರ್ಟಮೆಂಟಿನ ಡೆಪ್ಯೂಟಿ ತಹಸೀಲ್ದಾರರುಗಳು, ಮತ್ತು ಮೊದಲನೆಯ ದರ್ಜೆಯ ರೆವಿನ್ಯೂ ಇನ್ಸ್‌ಪೆಕ್ಟರ್ಸ್, ಇವರಿಬ್ಬರನ್ನು ಬಿಟ್ಟು, ಬಾಕಿ ಎಲ್ಲಾ ವಿಭಾಗದ ಜನರಪಟ್ಟಿ ಎಲ್ಲವು ಫೈನಲೈಸ್ ಆಗಿಬಿಟ್ಟಿದೆ. ಇದನ್ನೂ ಸಹ ನಾವು ಕಂಪ್ಲೀಟ್ ಮಾಡುವವರಿದ್ದೇವೆ. ನಮ್ಮಲ್ಲಿ ನಿಧಾನವಾಗುತ್ತಾ ಇರುವುದನ್ನು ಯಾವರೀತಿಯಾಗಿ ಕಡಿಮೆ ಮಾಡಬೇಕು ಎನ್ನುವುದಕ್ಕೆ ಎಫಿಷಿಯನ್ಸಿ ರೀಸರ್ಚ್ ಬ್ಯೂರೋ ಎಂದು ಒಂದು ಇದೆ. ಕೆಲವು ಡಿಪಾರ್ಟಮೆಂಟಲ್ ಸ್ಟಡೀಸ್ ಎಂದು ಮಾಡಿದ್ದೇವೆ ಸ್ಟಾಫಿಂಗ್ ಪ್ಯಾಟರ್ನ್ ಯಾವರೀತಿ ಇರಬೇಕು. ಪ್ರೊಸೀಜರ್ ಏನು ಇರಬೇಕು ಎಂದು ಸುಮಾರು ೧೨೦ ಸ್ಟಡೀಸ್ ಹಾಗೆ ಮಾಡಿದ್ದೇವೆ. ಅನೇಕ ಡಿಪಾರ್ಟಮೆಂಟುಗಳಲ್ಲಿ ಸಂಬಂಧಪಟ್ಟ ಕೆಲವು ಡೈರೆಕ್ಟರುಗಳು ಕೆಲವು ಸಲಹೆಗಳನ್ನು ಇಂಪ್ಲಿಮೆಂಟ್ ಮಾಡಿ ಹತ್ತೂವರೆ ಲಕ್ಷ ರೂಪಾಯಿಗಳ ಸೇವಿಂಗ್ಸ್ ಕೂಡ ಆಗಿದೆ.

ಆಮೇಲೆ ಸೆಕ್ರೆಟರಿಯೇಟ್ ಡಿಲೇ, ಬಗ್ಗೆ ಹೇಳುತ್ತಾ ಇದ್ದಾರೆ. ಡಿಲೇಸ್ ಏಕೆ ಎನ್ನುವುದನ್ನು ಸ್ವಲ್ಪ ನಾವು ತಿಳಿಯುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ, ಇದರಲ್ಲಿ ಅನೇಕ ಎಕ್ಸಪೆರಿಮೆಂಟ್ಸ್ ನಡೆದಿವೆ.

ಹಿಂದೆ ಗೋರವಾಲ ಎನ್ನುವವರಿಂದ ಕೆಲವು ಸಲಹೆಗಳು ಬಂದುವು. ಗೋರವಾಲ ಅವರು ಕೊಟ್ಟಂಥ ಸಲಹೆಯನ್ನು ಇಂಪ್ಲಿಮೆಂಟ್ ಮಾಡಿದರು ಮತ್ತೆ ಪುನಃ ಹಳೆಯ ಮಾರ್ಗಕ್ಕೆ ಬಂದರು. ಒಟ್ಟಿನಲ್ಲಿ ಇನ್ನೂ ಸಮಾಧಾನಕರವಾದ ರೀತಿಯಲ್ಲಿ ಇಲ್ಲ. ನನಗಂತೂ ಇದು ಸಮಾಧಾನವಾಗಿಲ್ಲ.

ಶ್ರೀ ಕೆ. ಪ್ರಭಾಕರ್.—ಶ್ರೀಮಾನ್ ಎನ್. ಎಸ್. ಹಿರಣ್ಣಯ್ಯನವರ ಮೆಥೆಡ್ ಬಹಳ ಚೆನ್ನಾಗಿತ್ತು.

ಶ್ರೀ ಡಿ. ದೇವರಾಜ ಅರಸ್.—ಅದನ್ನು ತೆಗೆಸಿನೋಡುತ್ತೇನೆ ಆ ಮೆಥೆಡ್ ಈಗ ವರ್ಕ್ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಇನ್ನು ಈ ನೋಟಿಂಗ್ ಹಾಕುವ ಬಗ್ಗೆ—ಇಲ್ಲಿ ಏನಾಗುತ್ತದೆ ಎಂದರೆ, ಬಹಳ ಜನ ಅಂಡರ್ ಸೆಕ್ರಟರಿಗಳು, ಡೆಪ್ಯೂಟಿ ಸೆಕ್ರೆಟರಿಗಳು, ಅವರಿಂದ ಇವರಿಂದ ಹೀಗೆ ಹೋಗುವ ಪದ್ಧತಿ ಬಂದಿದೆ. ಅದನ್ನು ಕಡಿಮೆ ಮಾಡುವುದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ I am at it. ಯಾವ ಲೆವೆಲ್‌ನಲ್ಲಿ ನೋಟಿಂಗ್ ಕಡಿಮೆ ಮಾಡಿ ಯಾವ ರೆಸ್‌ಪಾನ್ಸಿಬಲ್ ಆಫೀಸರ್ ಇದನ್ನು ಮಾಡಬೇಕು ಎಂದು ಯೋಚನೆ ಮಾಡುತ್ತಾ ಇದ್ದೇವೆ. ಒಬ್ಬ ಗುಮಾಸ್ತರು ನೋಟ್ ಹಾಕಿದರೆ, ಅದು ಅವರ ಮೇಲ್ಪಟ್ಟ ಸೆಕ್ಷನ್ ಆಫೀಸರ್ಸ್ ಅಂಡರ್ ಸೆಕ್ರಟರಿ ಮುಂತಾದವರ ಬಳಿಗೆ ಹೀಗೆ ಹೋಗುತ್ತಾ ಇರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನೋಟಿಂಗ್ ನಿಲ್ಲದಿದ್ದರೆ, ಕೆಲವರಿಗೆ ಬರೆಯುವುದಕ್ಕೆ ಆಗುವುದಿಲ್ಲ

ಶ್ರೀ. ಡಿ ದೇವರಾಜ ಅರಸ್.—ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ನೋಟಿಂಗ್ ಆಫೀಸರ್ಸ್‌ಗೆ ಬೇಕಾಗಿನೆ ನಮಗೂ, ನಿಮಗೂ ಅಲ್ಲ.

ಶ್ರೀ ಡಿ. ದೇವರಾಜ ಅರಸ್.—ಇದನ್ನೆಲ್ಲಾ ಸರಿಮಾಡಿಕೊಂಡು ಹೋಗಬೇಕಾಗಿದೆ. ಆಮೇಲೆ ಇನ್ನೊಂದು ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏನೆಂದರೆ, ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಫ್ ಸೆಕ್ಷನ್ ಆಫೀಸರ್ಸ್—ಇದನ್ನು ಪ್ರಯತ್ನ ಮಾಡುತ್ತಿದ್ದೇವೆ. ಪ್ರಮೋಷನ್‌ನಿಂದ ನಮಗೆ ಸರಿಯಾದಂಥ ಜನರು ಸಿಕ್ಕುವುದು ಕಷ್ಟವಾಗುತ್ತಿದೆ We have been thinking of direct recruitment hereafter ೧೦ ಪರ್ಸೆಂಟ್ ಸೆಕ್ಷನ್ ಆಫೀಸರ್ಸ್ ಅನ್ನು ಡೈರೆಕ್ಟ್ ರೆಕ್ರೂಟ್‌ಮೆಂಟ್‌ನಿಂದ ತರಬೇಕು ಎನ್ನುವುದು ಇದೆ. ಮತ್ತೆ ಅಂಡರ್ ಸೆಕ್ರೆಟರಿಗಳಿಗೂ ಕೂಡ ಸೆಲೆಕ್ಷನ್ ಗ್ರೇಡ್ ಇಡಬೇಕು. ಸೀನಿಯಾರಿಟಿ ಕಮ್ ಮೆರಿಟ್‌ಗಿಂತ ಡೈರೆಕ್ಟ್ ಆಗಿ ಇರುವುದು ಒಳ್ಳೆಯದು.

ಶ್ರೀ ಕಾಗೋಡು ತಿಮ್ಮಪ್ಪ.—ಡೆಪ್ಯೂಟಿ ಸೆಕ್ರಟರಿಗೂ ಅಂಡರ್ ಸೆಕ್ರಟರಿಗೂ ಏನು ವ್ಯತ್ಯಾಸ.

ಶ್ರೀ ಡಿ. ದೇವರಾಜ ಅರಸ್.—ಡೆಪ್ಯೂಟಿ ಸೆಕ್ರಟರಿ ಸ್ವಲ್ಪ ಮೇಲೆ, ಅಂಡರ್ ಸೆಕ್ರಟರಿ ಸ್ವಲ್ಪ ಕೆಳಗೆ, ಅಷ್ಟೆ. ಡೆಲಿಗೇಷನ್ ಆಫ್ ಅಥಾರಿಟಿ ನಾವು ಬಂದಮೇಲೆ ಡಿಸ್ಟ್ರಿಕ್ಟ್ ಲೆವೆಲ್‌ನಿಂದ ಡೈರೆಕ್ಟ್ ಆಗಿ ಸೆಕ್ರಟರೀಸ್, ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ಸ್‌ಗೆ ಬರುವಂತೆ ಮಾಡಿದ್ದೇವೆ. ಡಿಸ್ಟ್ರಿಕ್ಟ್ ಲೆವೆಲ್ ಆಫೀಸರ್ಸ್‌ಗೆ ನಾವು ಅನೇಕ ಪವರ್ಸ್‌ಗಳನ್ನು ಡೆಲಿಗೇಟ್ ಮಾಡಿದ್ದೇವೆ. As a matter of fact due to the delegation of powers, we were able to meet the drought situation promptly and effectively. We have done it recently, ಡಿಸ್ಟ್ರಿಕ್ಟ್‌ಲೆವೆಲ್‌ನಲ್ಲಿ ಪೂರ್ತಿ ಸಮರ್ಪಕವಾಗಿ ಕೆಲಸ ಆಗುತ್ತಾ ಇದೆ ಎಂದು ನಾನು ಹೇಳುತ್ತಿಲ್ಲ. There is some improvement We are aiming at it. ಮತ್ತೆ, ಡೆಪ್ಯೂಟಿ ಕಮಿಷನರ್ಸ್ ಅನ್ನು ಪೋಸ್ಟ್ ಮಾಡಬೇಕಾದರೆ, ಎರಡು ವರ್ಷ ಅನುಭವ ಇರುವವರನ್ನು ಹಾಕುತ್ತಾರೆಂದು ಕೆಲವರು ಹೇಳಿದರು. ಅವರನ್ನು ಪೋಸ್ಟ್ ಮಾಡ ಬೇಕಾದರೆ, ೪ ವರ್ಷವಾಗುತ್ತದೆ. ಎರಡು ವರ್ಷ ಪ್ರೊಬೇಷನರಿ ಪೀರೀಯಡ್, ಹೀಗೆ ನಾಲ್ಕು ವರ್ಷವಾಗುತ್ತದೆ. ಇವರು ೮ ವರ್ಷವಾದರೂ ಕೆಲಸ ಮಾಡಿದ ಮೇಲೆ, ಇವರನ್ನು ಡೆಪ್ಯೂಟಿ ಕಮಿಷನರ್ಸ್ ಆಗಿ ಹಾಕತಕ್ಕದ್ದು ಒಳ್ಳೆಯದು. I want to enforce it.

ಶ್ರೀ ಎಚ್. ಡಿ. ದೇವೇಗೌಡ.—ಅದು ಒಳ್ಳೆಯ ತೀರ್ಮಾನ.

ಶ್ರೀ ಡಿ. ದೇವರಾಜ ಅರಸ್.—ಸಂದರ್ಭಾನುಸಾರವಾ ಕಂಟ್ರಾಕ್ಟ್ ಬೇಸಿಸ್ ಮೇಲೆ ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಅನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಇದೆ. ಅನೇಕ ಸಂದರ್ಭದಲ್ಲಿ ಬಿ ಸೀನಿಯಾರಿಟಿ ಪ್ರಮೋಷನ್ ಆಗಿ ಬಂದು ಕೂತುಕೊಳ್ಳುತ್ತಾರೆ, ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಇತ್ತೀಚೆಗೆ ತುಂಬಾ ಅನುಭವ ಇರುವವರು ಬೇಕಾಗುತ್ತದೆ. ಅಂಥ ಜನ ಸಿಕ್ಕದೇಹೋದರೆ ಹೊರಗಡೆಯಿಂದ ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧವಿರ ಬೇಕಾಗುತ್ತದೆ, ಅದಕ್ಕೋಸ್ಕರ ಕಾಂಟ್ರಾಕ್ಟ್ ಬೇಸಿಸ್

(ಶ್ರೀ ಡಿ. ದೇವರಾಜ ಅರಸ್)

ಮೇಲೆ ಅಪಾಯಿಂಟಮೆಂಟ್ ಮಾಡೋಣ ಎಂದು ಇದ್ದೇವೆ. Government have taken a decision. We will take than on that basis whenever we feel like taking.

ಶ್ರೀ ಎಂ.ಬಿ. ರಾಮಸ್ವಾಮಿ.—ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಲ್ಲಿ ನಾರಾಯಣ ಸ್ವಾಮಿ ಎನ್ನುವವರಿಗೆ ರಿಕ್ವಸಿಟ್ ಕ್ವಾಲಿಫಿಕೇಷನ ಇದ್ದರೂ ಕೂಡ ಅವರಿಗೆ ಪ್ರಮೋಷನ್ ಡಿನೈ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನೀವು ನಾವು ಆ ರೀತಿ ಹೇಳುತ್ತಾ ಕೂತುಕೊಂಡರೆ ಅದು ಯೋಗ್ಯವಲ್ಲ. Leave this to the Government and the Minister concerned. How can you judege always?

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯಾಂಗದ ಧೋರಣೆಯ ಪ್ರಕಾರ ನಮಗೆ ರಕ್ಷಣೆ ಕೊಡಬೇಕು ನಿಮ್ಮನ್ನೇ ನಂಬಿರುವವರು ನಾವು ಎಲ್ಲೆಲ್ಲಿ ಯಾರಿಗೆ ಅರ್ಹತೆ ಇದೆ; ಎಲ್ಲೆಲ್ಲಿ ಯಾರಿಗೆ ಯೋಗ್ಯತೆ ಇದೆ ಅವರಿಗೆ ಪ್ರಾತಿನಿಧ್ಯ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ಇನ್ನು ಕರಪ್ಷನ್ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಇದಕ್ಕೆ ಅನೇಕ ಕಾರಣಗಳು ಇವೆ. ಕೆಲಸಗಳನ್ನು ಮಾಡುವವರು ನಿಧಾನಮಾಡುವುದು ಬಹುಮಟ್ಟಿಗೆ ಈ ಕರಪ್ಷನ್‌ಗೆ ಒಂದು ಕಾರಣವಾಗಿದೆ. ಮೊದಲು ಸೆಕ್ರಟರಿಯೇಟ್ ಲೆವಲ್‌ನಿಂದ ಡಿಪಾರ್ಟ್‌ಮೆಂಟಿನವರೆಗೂ ಆಫೀಸ್ ಇನ್ಸ್‌ಪೆಕ್ಷನ್ ಎಂದು ಒಂದು ಕಾಲದಲ್ಲಿ ನಡೆಯುತ್ತಿತ್ತು: ಕಾರಣಾಂತರಗಳಿಂದ ಆ ಇನ್ಸ್‌ಪೆಕ್ಷನ್ ಕಡೆ ಗಮನ ಕಡಿಮೆ ಆದ ಹಾಗೆ ಆಗಿದೆ.

The Divisional Commissioner's should go and inspect the Office of the Deputy Commissioners, and they in turn inspect the Office of the Assistant Commissioners, and they in turn the Office of the Tahasildars.

ಇದನ್ನು ಇನ್‌ಸಿಸ್ಟ್ ಮಾಡುತ್ತಾ ಇದ್ದೇವೆ. ಹುಚ್ಚಮಾಸ್ತಿ ಗೌಡರು ಏಕಾಏಕಿ ಆಫೀಸ್ ಇನ್‌ಸ್ಪೆಕ್ಟ್ ಮಾಡುತ್ತಾ ಇದ್ದಾರೆ. ವಿಜಿಲೆನ್ಸ್ ಕಮಿಷನ್ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಅಲ್ಲಿ ಕೆಲಸಗಳು ನಿಧಾನವಾಗಿ ನಡೆಯುತ್ತಾ ಇಲ್ಲ. ಒಂದು ವಿಚಾರ ತಮ್ಮ ಗಮನಕ್ಕೆ ತರಬೇಕು. ತಮಗೆ ಅಂಕಿ ಅಂಶಗಳನ್ನು ಕೊಟ್ಟರೆ ಬಹುಶಃ ತಾವು ಏನು ತಿಳಿದುಕೊಂಡಿದ್ದೀರಿ ಆ ಭಾವನೆಯನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿಕೊಳ್ಳಬಹುದು. ವಿಜಿಲೆನ್ಸ್ ಕಮಿಷನ್ನಿನಲ್ಲಿ ಬಹಳ ತೀವ್ರಗತಿಯಿಂದ ತೀರ್ಮಾನಗಳು ಆಗುತ್ತಿದೆ. ಅದು ಸಾಲದು ಎಂದು ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ತೀರ್ಮಾನಗಳು ಏನು ಆಗಿವೆ.

ಶ್ರೀ ಡಿ. ದೇವರಾಜ ಅರಸ್.—ಬಂದಿರತಕ್ಕ ರೆಫರನ್ಸ್, ಡಿಸ್‌ಪೋಸಲ್‌ಗಳು ತೆಗೆದುಕೊಂಡರೆ 2000 and odd cases have been disposed of after this Vigilance Commissioner took up office, efficiency has gone up in the Vigilance Commissioner's office. ಹೆಚ್ಚಿಗೆ ಜನ ಬಂದು ವಿಜಿಲೆನ್ಸ್ ಕಮಿಷನ್‌ಗೆ ದೂರು ಕೊಡುತ್ತಾ ಇದ್ದಾರೆ. ಕೆಲಸಗಳು ಜಾಸ್ತಿ ಆಗುತ್ತಾ ಇದೆ. ಜನರು ಮುಂದೆ ಬಂದು ಎಲ್ಲಿ ತಪ್ಪಾಗಿದೆ ಎಂದು ಹೇಳುತ್ತಾ ಇದ್ದಾರೆ. ಈ ಕಾರಣಗಳು ಇರುವುದರಿಂದ ಕೆಲಸ ಜಾಸ್ತಿ ಆಗಿದೆ. ನಾವು ಈ ವಿಜಿಲೆನ್ಸ್ ಕಮಿಷನನ್ನು ಸ್ಟ್ರೆಂಗ್‌ತನ್ ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಿದ್ದೇವೆ. ಪಬ್ಲಿಕ್ ಎವೇರ್‌ನೆಸ್ ಜಾಸ್ತಿ ಆಗಿದೆ. ಸದಸ್ಯರು ತಮ್ಮ ಕ್ಷೇತ್ರದಲ್ಲಿರುವ ಜನಗಳ ಕಷ್ಟ ದುಃಖಗಳನ್ನು ಕೇಳುತ್ತಿದ್ದಾರೆ ಮತ್ತು ದಿನ ಬಂದು ಇಲ್ಲಿ ಹೇಳುತ್ತಾ ಇದ್ದಾರೆ. ವಿಜಿಲೆನ್ಸ್ ಕಮಿಷನ್ ಮತ್ತು ಸರ್ಕಾರದವರು ಕೇಳುತ್ತಾರೆ ಎಂದು ಜನರ ಮನಸ್ಸಿಗೆ ಬಂದು ಹೆಚ್ಚು ಹೆಚ್ಚು ಜನ ದೂರು ಕೊಡುವುದು ನಡೆದಿದೆ. ಹೆಚ್ಚು ಹೆಚ್ಚು ರೆಫರೆನ್ಸ್ ವಿಜಿಲೆನ್ಸ್ ಕಮಿಷನ್‌ಗೆ ಹೋಗುತ್ತಿದೆ. ಅಲ್ಲಿ ಕೂಡ ಕೆಲಸ ಜಾಸ್ತಿ ಆಗುತ್ತಿದೆ. ಅದು ವಿನಹ ಧೈರ್ಯವಾಗಿ ನಾನು ಹೇಳಬಲ್ಲೆ, ಅದು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾ ಇದೆ. ಯಾರ ಒಂದು ದಾಕ್ಷಿಣ್ಯಕ್ಕೂ ಒಳಗಾಗದೇ ಕೆಲಸ ಮಾಡುತ್ತಾ ಇದೆ ಎಂದು ಹೇಳಬಲ್ಲೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರ ತೀರ್ಮಾನಗಳನ್ನು ಮಾನ್ಯ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಟೀಕಾದಷ್ಟು ಮಾಡಿದ್ದೇವೆ. ಅಕಸ್ಮಾತ್ ಮಾಡದೇ ಇರಬಹುದು. ಮುಕ್ಕಾಲು ಭಾಗ ಅವರು ಹೇಳಿದ್ದೇ ಮಾಡುವುದು. ಯಾವುದೂ ಬೇರೆ ಮಾಡುವುದಕ್ಕೆ ಹೋಗಿಲ್ಲ. ಸಾಧಾರಣವಾಗಿ ಅವರು ಏನೇನು ಶಿಫಾರಸ್ಸು ಮಾಡಿದ್ದಾರೆ ಅದರಂತೆ ನಡೆದುಕೊಂಡು ಬಂದಿದ್ದೇವೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನ ವಿಚಾರ ಹೇಳಿದರು. ಅದರ ಸಂಖ್ಯೆ ಏತಕ್ಕೆ ಹೆಚ್ಚಿಗೆ ಮಾಡಿದಿರಿ ಎಂದು ಕೇಳಿದರು. ೭ ಜನ ಮಾಡುವುದು ಅಗತ್ಯ ಎಂದು ಸರ್ಕಾರಕ್ಕೆ ಕಂಡು ಬಂದಿದೆ. ಜಾಸ್ತಿ ಮಾಡದಿದ್ದರೆ ಅವರು ಮಾಡುತ್ತಾ ಇರುವ ಕೆಲಸಗಳನ್ನು ಬೇಗ ಬೇಗ ಆಗುವುದಕ್ಕೆ ಸಾಧ್ಯವಿಲ್ಲ ಎಂದು ಕಂಡು ಬಂದಿದೆ. ಕೊನೆಯದಾಗಿ ಒಂದು ಮಾತು ಹೇಳಬೇಕು.

SRI H. D. DEVEGOWDA.—Too many portfolios ಇರುವುದರಿಂದ ತಮಗೆ ಕನ್‌ಫ್ಯೂಷನ್ ಆಗಿದೆ.

ಶ್ರೀ ಡಿ. ದೇವರಾಜ ಅರಸ್.—ಒಟ್ಟಿನಲ್ಲಿ ಮಾನ್ಯ ಅಧ್ಯಕ್ಷರೇ ಆಡಳಿತ ಸಂರಕ್ಷಿತವಾಗಿ ಆಗುವ ಹಾಗೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಪೋಲೀಸಿನವರ ಕೈಯಲ್ಲಿ

ಶ್ರೀ ಡಿ. ದೇವರಾಜ ಅರಸ್.—ಪೋಲೀಸಿನವರು ಇಲ್ಲದೇ ಇದ್ದರೆ ನೀವು ಹೇಗೆ ಉಳಿಯುತ್ತೀರಾ ? ಸಿಥಿಲವಾಗಿರುವ ಜನ ಉಳಿಯುವುದು ಕಷ್ಟ. ನಮ್ಮ ಹಾಗೆ ಇದ್ದರೆ ಏಟು ಕೊಟ್ಟರೂ ತಡೆದುಕೊಳ್ಳುವುದಕ್ಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ರಕ್ಷಣೆ ಕೋರಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ರಕ್ಷಣೆ ಸದಾ ಇರುತ್ತದೆ. ಇಲ್ಲದೇ ಇದ್ದರೆ ಕಷ್ಟವಾಗುತ್ತದೆ. ದೇಶದ ವಾತಾವರಣ ಯಾವ ರೀತಿ ಇದೆ ಎಂದು ತಿಳಿದುಕೊಂಡು ಯೋಚನೆ ಮಾಡಿದರೆ ಕರ್ನಾಟಕದಲ್ಲಿ ಸಾಧಿಸಿದಂತ ಕಾರ್ಯಗಳನ್ನು ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ ಪೋಲೀಸ್ ಇಲಾಖೆಯಾಗಲೀ ಮತ್ತೆ ಯಾವುದೇ ಇಲಾಖೆಯಾಗಲೀ ನಮ್ಮ ಕೆಲಸ ಕಾರ್ಯಗಳ ಬಗ್ಗೆ ನಾವು ಪೇಚು ಬೀಳುವ ರೀತಿಯಲ್ಲಿ ಇಲ್ಲ, ಬೆನ್ನು ತಟ್ಟಿಕೊಳ್ಳುವಂಥ ಕೆಲಸ ಮಾಡದಿದ್ದರೂ ಅವಮಾನಕರವಾದ ಅಥವಾ ಹೇಯಕರವಾದ ಕೆಲಸ ಮಾಡಲಿಲ್ಲ ಬೇರೆಯವರಿಗೆ ಕಂಪೇರ್ ಮಾಡಿದರೆ ಸ್ಟ್ರೆಸಸ್ ಮತ್ತು ಸ್ಟ್ರೇನ್ಸ್ ಇದ್ದರೂ ಕೂಡ ಚೆನ್ನಾಗಿಯೇ ಕೆಲಸ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಹೆಚ್ಚು ನೆಮ್ಮದಿ ಇದೆ ಎಂದು ಹೆಚ್ಚು ಹೆಚ್ಚು ಕೈಗಾರಿಕಾ ಉದ್ಯಮಿಗಳು ಇಲ್ಲಿಗೆ ಬರುತ್ತಿದ್ದಾರೆ. Inspite of Mr. Krishnan and his friends ಈಗಲೂ they want to come here and start industries comparatively.

ಇಲ್ಲಿ ವಾತಾವರಣ ಎಲ್ಲಾ ದೃಷ್ಟಿಯಿಂದ ಚೆನ್ನಾಗಿದೆ. ಅದು ಒಂದು ಸಂತೋಷದ ವಿಚಾರ. ನಾನು ಹೇಳಿದ್ದನ್ನ ಕೇಳಿ ಮಾನ್ಯ ಸದಸ್ಯರು, ಮನಸ್ಸು ಬದಲಾಯಿಸಿ ಕೊಂಡು ನಾನು ಮಂಡಿಸಿರತಕ್ಕ ಬೇಡಿಕೆಗಳೆಲ್ಲವನ್ನೂ ಸರ್ವಾನುಮತದಿಂದ ಒಪ್ಪಿ ಪಾಸು ಮಾಡಿಕೊಡಿ ಎಂದು ಹೇಳುತ್ತೇನೆ.

Madam Speaker.—I will now put the motion to the vote of the House.

The question is.—

> That the respective sums not exceeding the amounts inclusion of the sum granted" on account mentioned in the list of Demands be granted to Government to defray the charges which will come in course of payment during the financial year for the period ending with 31st day of March 1975, in respect of Demand Nos 2, 7, 12, 13, 15, 16, 21, and 26.

Motion was adopted and the sums were granted."

As ordered by the Chair the Demands for grants adopted by the House are reproduced below :

DEMAND NO. 2—GOVERNOR, MINISTERS AND PUBLIC SERVICE COMMISSION

"That a sum not exceeding Rs. 16,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 2 "Governors, Minister and Public Service Commission."

DEMAND NO. 7—STATE EXCISE

"That a sum not exceeding Rs. 2,7 ,99,000 inclusive of the sum granted 'on account' be granted to the Government' to defray the charges which will come in course of payment during the financial year ending 31st day of March 1975 in respect of Demand No 7 "State Excise".

DEMAND NO. 12—SECRETARIAT

"That a sum not exceeding Rs. 2 12,93,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 12 Secretariat".

DEMAND NO. 13—DISTRICT ADMINISTRATION

'That a sum not exceeding Rs. 4,17,88,000 inclusive of the sum granted 'an account' be granted to the Government to defray the charges which will come in course of payment during the financial year ending 31st day of March 1975 in respect of Demand No. 13 "District Administration".

DEMAND NO. 15—POLICE

"That a sum not exceeding Rs. 15,81 80,000 inclusive of the sum granted 'on account' be granted to the Government to defray the charges which will come in course of payment during the financial year ending 31st March 1975 in respect of Demand No. 15 "Police".

DEMAND NO. 16—JAILS

"That a sum not exceeding Rs. 1,37,00,000 inclusive of the sum granted 'on account' be granted to the Government to defray the charges which will come in course of payment during the financial year ending 31st March 1975 in respect of Demand No. 16 "Jails".